provisions contained in this Bill. If that is the case, we want to know what prompted the Government to withdraw that Bill and introduce a new Bill. He must tell us what are the important deviations from the Bill which he is withdrawing.

Mr. SPEAKER.—Under what provision am I to allow a Debate ? It is a simple withdrawal. If the House refuses, then the leave to withdraw is not granted.

Sri C. J. MUCKANNAPPA.—He must say that for such and such reasons he is withdrawing the Bill.

Mr. SPEAKER.—The hon. Member may lease point out the rule in support of it.

Sri C. J. MUCKANNAPPA.—The chair permitted him to assign reasons why he is withdrawing.

Mr. SPEAKER.—It is very clear. I will put it to the vote of the House. The question is :

"That the City of Bangalore Municipal Corporation Amendment Bill, 1965, be withdrawn."

The motion was adopted.

CITY OF BANGALORE MUNICIPAL CORPORATION AMENDMENT BILL, 1966.

Motion to consider.

Sri R. M. PATIL.—I beg to move :

"That the City of Bangalore Municipal Corporation (Amendment) Bill, 1966 be taken into consideration."

Mr. SPEAKER—Motion moved :

"That the City of Bangalore Municipal Corporation (Amendment) Bill, 1966 be taken into consideration."

†Sri G. V. GOWDA (Palya).—I rise to a point of order. Just now, this House gave its approval for the withdrawal of the Bill which was pending consideration.

Mr. SPEAKER.—For the purpose of facilitating the work. The chair would like every member who raises the point of order to cite the rule that he is invoking and then state the facts in support of that.

Sri G. V. GOWDA.—Infer to rule 98 of the Rules. There will not be specific rules for certain matters. But conventions will be there.

Mr. SPEAKER.—Which is the convention ?

Sri G. V. GOWDA.—Just now the Hon'ble Minister took the approval of the House to withdraw the Bill that is pending consideration and also he said that he is bringing forward a Bill containing similar provisions which are more comprehensive. My submission is, when a Bill is withdrawn by the leave of the House, can another Bill containing similar provisions be introduced or con..lerd in the same session because in the case of Resolutions, when a resolution is introduced, the same kind of resolution is inadmissible in the same session. The same principle can be extended to a Bill or a question and the same thing cannot be raised in the same session. On the basis of that analogy, I contend the consideration of this Bill is not proper.

Sri S. SIVAPPA.—A Bill which has got the same objects and principles has been withdrawn. Now another Bill with the same objects and principles has been brought. The best thing is to bring an amendment and remove those sections which they want them to be removed. If they want to bring Bills every time, then what is the use of amendments ? Can the Minister introduce any Bill as he chooses containing the same principlesa nd objects which were embodied in a Bill which was withdrawn.

Mr. SPEAKER.—I am really sorry that matters are being handled like this. I have brought to the notice of the House at the very beginning that the time available today is short and we will not be able to cover up the work. Inspite of that, objections are raised. I am told they will search for rules and then they fall back upon convention and finally they say on the analogy of a resolution, this should be considered. But for resolutions there is a definite rule and so I am unable to uphold the contention. I say there is no point of order at all. For Resolutions there is a specific procedure. But so far as Bills are concerned, the procedure is totally different and there is nothing in the rules which says that if one Bill is withdrawn, another Bill cannot be brought in. In fact, the position is the other way. It is not wrong to have two Bills simultaneously on the same topic. Without finding out whether there is any authority in support of the point of order or not, and whether there is anything in the point of order or not, simply calling it a point of order and it is raised and I am called upon to give a ruling.

Sri S. SIVAPPA.—They could have modified it by bringing an amendment.—It is a waste of time of the House.

Mr. SPEAKER.—To say that it is a point of order for two senior members is not correct. There is no point of order. The Honb'le Minister will speak.

Sri S. SHIVAPPA.—I am sorry at the whimsical attitude of the Government.

Sri ANNA RAO GANAMUKHI (Afzalpur).—I have a point of order.

Mr. SPEAKER.—He may please refer to the rule.

Sri ANNA RAO GANAMUKHI.—Rule 98.

Mr. SPEAKER.—Rule 98 has been dealt with. I have said : That there is no point of order. I am not going to revise it.

(Sri Anna Rao Ganamukhi Stood).

Order, order...Order, order means, the Member must resume his seat.

Sri ANNA RAO GANAMUKHI,—I thought I must develop the point.

Mr. SPEAKER.—Wrong thinking puts him in a worng position. Because he is saying it does not mean that the same argument were not advanced.

Sri ANNA RAO GANAMUKHI.—Of course, the rule invoked is the same. When identical provisions are withdrawn and they are removed from the register, they will have to be introduced ; that is the point.

Sri S. M. KRISHNA (Maddur).—I am not trying to embarass you, Sir. May I humbly submit that the point raised by Sri Anna Rao deserves certain consideration, a little more consideration than it has got.

Mr. SPEAKER.—It is not even a point of order.

Sri S. M. KRISHNA.—I myself have not gone through Rule 98.

Mr. SPEAKER.—Is it my mistake ?

I am really sorry that even after the ruling is given, the member wants another ruling to be given on the same point and am I to entertain it ? He says "a little more cousideration" is necessary. It is a mild way of attacking the ruling given by the Chair.

Sri S. M. KRISHNA.—I am the last person to question the ruling of the Chair. I did not know that you had given a ruling.

Mr. SPEAKER.—I have given a ruling that neither Rule 98 or 97 prevent the House from dealing with it.

Sri R. M. PATIL.—Sir, I have to move this amending Bill on various considerations. Firstly, the Administration of the Corporation felt a little bit of inconvenience on account of certain provisions that are existing in the Bill, which need amendments. So such amendments are said to be administrative amendments.

There is a little agitation so far as the supply of water on the old basis is concerned. I made a statement on the floor of this House as well as on the floor of the other House. In order to enable to make certain arrangements between the Corporation and the Bangalore Water Supply and Sewerage Board. The provisions in the respective Acts, have been proposed for amendments. While considering this aspect, it was thought fit that there should be an amendment to the provision of the Bangalore Corporation Act as well as the Bangalore Water Supply and Sewerage Act. Accordingly, those amending provisions are included in this Amending Bill.

(SRI R. M. PATIL)

Thirdly, we have taken away the powers of the corporation to tax under the Urban Land Tax Bill, which this august House has passed very recently. The revenue that the Corporation was able to collect under those provisions, is lost to the Corporation. By way of consideration for the loss of revenue, Government thought fit that some provision must be made; in order to compensate the revenue to the Corporation, though not equally, at least to some extent, it should be given; even if it is greater, there is no objection. On that understanding, certain provisions have been included in order to tax the Government buildings, which are not meant for Government Offices but those that are used for purposes such as residential quarters, and commercial buildings which are used for commercial purposes. That will give a little revenue to the Corporation.

There are certain administrative difficulties facing the Corporation in the recovery of taxes—whether it be property tax or professional tax, or vehicle tax or carriage tax whatever it is. In order to see that the procedure was simplified, provisions have been made in this amendment.

The object of the amendment is so simple and so clear, namely, there should be efficient administration; that means, streamlining the administration of the Corporation. Secondly, augmentation of the resources of the Corporation. Thirdly, to facilitate administrative convenience.

In order to facilitate administrative convenience, it is necessary to empower the main executive officer of the Corporation, that is, the Corporation Commissioner; to empower him with larger powers so that in case of emergency or urgent works, he can expend to that extent.

There are a little administrative snags such as correspondence with the Government and with other authorities. The correspondence used to pass through the Mayor. The position of the Mayor is something greater than that of the Administrator. Therefore, without affecting the dignity and high position of the Worshipful Mayor, it has been provided that correspondence may be made to the Government and the other authorities by the Commissioner, and *vice versa*. These are the important provisions.

There is another provision. In order to have effective control over the disposal of movable and immovable properties, certain provisions have been provided in order to control the power of the authorities. So far as the Municipal Corporation is concerned, Government sanction is required in certain cases. That will give a little check in respect of the disposal of the property.

While assessing the properties, it is found that certain malpractices are likely to be indulged in. In order to prevent them as also to rectify and correct them, there is a provision in this amending Bill, empowering the Divisional Commissioner, a superior authority, to call for the papers, examine the records and ultimately correct the assessment if he deems it necessary.

These are the important provisions which are found necessary and absolutely essential to bring an Amendment to the Bangalore Municipal Corporation Act, 1951. These provisions are important and they may be considered. I think the House will accept them.

2-30 P.M.

† ಶ್ರೀ ಎಸ್. ಎಂ. ಕೃಷ್ಣ.—ಸ್ವಾಮಿ, ಅನುಮಾನಾಸ್ಪದವಾದಂಥ ರೀತಿಯಲ್ಲಿ ಹಿಂದೆ ಬಹಳ ಕೆಟ್ಟವಾತಾವರಣದಲ್ಲಿ ಮಾನ್ಯ ಸಚಿವರು ಮಂಡಿಸಿದಂಥ ತಿದ್ದುಪಡಿಯನ್ನು ಈ ಸಭೆಯ ಒಪ್ಪಿಗೆ ಪಡೆದು ವಾಪಸು ತೆಗೆದುಕೊಂಡು ಈಗ ಮತ್ತೊಂದು ಪರಿಷ್ಕೃತವಾದ ತಿದ್ದುಪಡಿಯನ್ನು ಸಭೆಯ ಮುಂದೆ ಮಾನ್ಯ ಸಚಿವರು ಮಂಡಿಸಿದ್ದಾರೆ. 1951ನೆ ಇಸವಿಯೊಳಗೆ ಬೆಂಗಳೂರು ನಗರ ಕಾರ್ಪೊರೇಷನ್ ಆವಿರ್ಭಾವಕ್ಕೆ ಬಂತು. 1951ನೆ ಇಸವಿಯಿಂದ ಒಂದೇ ಸಮನಾಗಿ ಬೆಂಗಳೂರು ಕಾರ್ಪೊರೇಷನ್ ಒಂದು ಪರಂಪರೆಯನ್ನು ಬೆಳೆಸಿಕೊಂಡು 1965ನೆ ಇಸವಿಯವರೆಗೂ ಬಂತು. 1965ನೆ ಇಸವಿಯಲ್ಲಿ ನಡೆದಂಥ ಒಂದು ಲಘು ಕಂಪನದಿಂದ ಕಾಂಗ್ರೆಸ್ಸಿನ ಸರ್ವ ಮಾನ್ಯತೆಗೆ ಜನತೆ ಬೇಸತ್ತು ಧಕ್ಕೆ ತಂದಾಗ ಸರ್ಕಾರದವರಿಗಾದರೂ ಕೂಡ ಅರಿವಾಯಿತು ಬೆಂಗಳೂರು ಕಾರ್ಪೊರೇಷನ್ನಿನಲ್ಲಿ ಎಲ್ಲ ವ್ಯವಹಾರಗಳೂ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂದು. ಮಾನ್ಯ ಸಚಿವರಾದರೂ ಈ ತಿದ್ದುಪಡಿಯನ್ನು ಮಂಡಿಸುವಾಗ ಕನ್‌ವಿನಿಯನ್ಸ್ ಎನ್ನುವ ಪದವನ್ನು ಉಪಯೋಗಿಸಿ ಕಾರ್ಪೊರೇಷನ್ನಿನ ಕನ್‌ವೀನಿಯನ್ಸ್ ಗೋಸ್ಕರ ಈ ತಿದ್ದುಪಡಿಯನ್ನು ತಂದಿದ್ದೇವೆ ಎಂದು ಹೇಳಿದರು. ನನಗಾದರೂ ಸಂಶಯ ಬರುತ್ತದೆ, ಈ ತಿದ್ದುಪಡಿಯನ್ನು ತಂದಿರತಕ್ಕದು ಕಾರ್ಪೊರೇಷನ್ನಿನ ಕ 'ವೀನಿಯನ್ಸ್‌ಗೋ ಅಥವಾ ಕಾರ್ಪೊರೇಷನ್ನಿನ ಕುತ್ತಿಗೆಯನ್ನು ಹಿಡಿದು, ಹಿಸಕಬೇಕೆಂದು ಪ್ರಯತ್ನ ಪಡುತ್ತಿರತಕ್ಕ ಸರ್ಕಾರದ 'ಕನ್‌ವೀನಿಯನ್ಸ್‌ಗೋ' ಎನ್ನುವ ಅನುಮಾನ ನನ್ನನ್ನು ಬಾಧಿಸುತ್ತಿದೆ.

ಬಹಳ ಸರಳವಾಗಿದೆ, ಅಷ್ಟೇ ಪ್ರಾಮುಖ್ಯವಾಗಿದೆ ಈ ತಿದ್ದುಪಡಿ ಎಂದು ಮಾನ್ಯ ಸಚಿವರು ಈ ಸಭೆಗೆ ಅರಿಕೆ ಮಾಡಿಕೊಂಡರು. ಸರಳವಾಗಿದೆ ಎನ್ನುವುದನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ಆದರೆ ಈ ತಿದ್ದುಪಡಿ ಬಹಳ ಪ್ರಾಮುಖ್ಯವಾಗಿದೆ ಎನ್ನುವ ಮಾತನ್ನು ನಾನು ಒಪ್ಪಲೇ ಬೇಕಾಗಿದೆ. ಇವತ್ತಿನ ದಿವಸದಲ್ಲಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕು ಎನ್ನುವ ಕೂಗು ಎಲ್ಲ ಕ್ಷೇತ್ರಕ್ಕೂ ಅನ್ವಯಿಸುತ್ತ ಇರುವಾಗ ಕಾರ್ಪೊರೇಷನ್ ವ್ಯವಹಾರಗಳ ಬಗ್ಗೆ ಇನ್ನೂ ಹೆಚ್ಚಿನ ಅಧಿಕಾರಗಳನ್ನು ಕಾರ್ಪೊರೇಷನ್ನಿಗೆ ಕೊಡಬೇಕು, ಸ್ಥಳೀಯ ಸಂಸ್ಥೆಗಳಿಗೆ ಇನ್ನೂ ಹೆಚ್ಚಿನ ಅಧಿಕಾರಗಳನ್ನು ಕೊಡಬೇಕು ಎಂದು ಈ ಸಭೆಯ ಒಳಗೆ ಮತ್ತು ಹೊರಗೆ ಹೋರಾಟ ಮಾಡುತ್ತಿದ್ದೇವೆ. ಅದಕ್ಕೆ ತಿಲಾಂಜಲಿ ಕೊಡತಕ್ಕ ತಿದ್ದುಪಡಿಯನ್ನು ಮಾನ್ಯ ಸಚಿವರು ಈ ಸಭೆಯ ಮುಂದೆ ತಂದಿದ್ದಾರೆ. ಇದರ ಬಗ್ಗೆ ಸಭೆ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ. ಯಾರು ಈ ದಿವಸ ಅಧಿಕಾರದಲ್ಲಿರುತ್ತಾರೆ ಅದು ಮುಖ್ಯವಲ್ಲ. ಬೆಂಗಳೂರು ಕಾರ್ಪೊರೇಷನ್ನಿನಲ್ಲಿ ಹೋದ ವರ್ಷ ಪೌರ ಸಮಿತಿಯ ಮೇಯರ್ ಇದ್ದರು, ಈ ವರ್ಷ ಕಾಂಗ್ರೆಸ್ಸಿನ ಮೇಯರ್ ಇದ್ದಾರೆ. ಆದುದರಿಂದ ವ್ಯಕ್ತಿಗಳ ಅಥವಾ ಪಕ್ಷಗಳ ತಿಕ್ಕಾಟವನ್ನು ಗಣನೆಗೆ ತೆಗೆದುಕೊಳ್ಳದೆ ಒಟ್ಟಾರೆ ಬೆಂಗಳೂರು ನಗರದ ಇತಿಹಾಸ ಹಾಗೂ ಬಹು ಪ್ರಾಮುಖ್ಯವಾದ ಈ ಸ್ಥಳೀಯ ಸಂಸ್ಥೆಯ ಯಶಸ್ಸನ್ನು ಗಮನದಲ್ಲಿಟ್ಟು ಈ ತಿದ್ದುಪಡಿಯತ್ತ ನಾವು ನಮ್ಮ ದೃಷ್ಟಿಯನ್ನು ಹರಿಸಬೇಕಾಗಿದೆ.

ಸ್ವಾಮಿ, ಕೊನೆಯದಾಗಿ ಸಚಿವರು ಹೇಳಿದರು : ಕರೆಸ್ಪಾಂಡೆನ್ಸ್ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಿದ್ದೇವೆ. ಆ ಬದಲಾವಣೆಯಲ್ಲಿ ಮಾನ್ಯ ಮೇಯರ್ ಅವರ ಘನತೆಗಾಗಲೀ, ಅವರ ಸ್ಥಾನಕ್ಕಾಗಲೀ ಯಾವ ವಿಧವಾದ ಚ್ಯುತಿಯನ್ನೂ ತರಲಿಲ್ಲ ಎಂದು ಹೇಳಿದರು. ನನಗಾದರೂ ಒಂದು ಸಂಶಯ ಬರುತ್ತದೆ, ಗೌರವಕ್ಕೆ ಸ್ಥಾನಕ್ಕೆ ಚ್ಯುತಿ ಬರಬೇಕಾದರೆ ಏನನ್ನು ಮಾಡಿದರೆ ಮಾನ್ಯ ಸಚಿವರು ಅವರ ಸ್ಥಾನಕ್ಕೆ, ಅವರ ಗೌರವಕ್ಕೆ ಚ್ಯುತಿ ಬಂತು ಎಂದು ಒಪ್ಪಿಕೊಳ್ಳುತ್ತಾರೆ ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಇದುವರೆಗೂ ಕಾರ್ಪೊರೇಷನ್ ಕಮಿಷನರ್ ಅವರು ಮೇಯರ್ ಅವರ ಅಧೀನಾಧಿಕಾರಿ. ಇದೇ ಅರ್ಥ ವಿವರಣೆಯನ್ನು ಇನ್ನೂ ಹೆಚ್ಚು ಅನ್ವಯ ಮಾಡುವುದಕ್ಕೆ ಹೋದರೆ ಕೇಂದ್ರ ಸರ್ಕಾರದವರು ಚೀಫ್ ಸೆಕ್ರೆಟರಿಯನ್ನು ನಾವು ಕಳಿಸುತ್ತೇವೆ, ಅವರು ಐ.ಸಿ.ಎಸ್. ಅಧಿಕಾರಿ ಅವರೇ ನೇರವಾಗಿ ಡೆಲ್ಲಿಗೆ ಪತ್ರವನ್ನು ರವಾನೆ ಮಾಡಬಹುದು ಎಂದು ಹೇಳಬಹುದು. ಮುಖ್ಯ ಮಂತ್ರಿಗಳೂ ನೇರವಾಗಿ ಡೆಲ್ಲಿಗೆ ಪತ್ರ ಬರೆಯುತ್ತಾರೆ, ಚೀಫ್ ಸೆಕ್ರೆಟರಿಯವರೂ ಬರೆಯಬಹುದು ಎಂದರೆ ಆಗ ಮುಖ್ಯ ಮಂತ್ರಿಗಳ ಸ್ಥಾನಕ್ಕಾಗಲೀ, ಅವರ ಘನತೆಗಾಗಲೀ, ಯಾವ ಚ್ಯುತಿಯನ್ನೂ ತರಲಿಲ್ಲ ಎನ್ನುವ ವಾದವನ್ನು ಕೇಂದ್ರ ಸರ್ಕಾರದವರು ಇಟ್ಟರೆ ಆಗ ಎಷ್ಟು, ಅಪ್ರಾಯಮಾನವಾಗಿರುತ್ತದೆ, ಎಷ್ಟು ಚೆನ್ನಾಗಿರುತ್ತದೆ ಎನ್ನುವುದನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳ

(ಶ್ರೀ ಎಸ್. ಎಂ. ಕೃಷ್ಣ)

ಬೇಕಾಗಿದೆ. ಸಭೆಯ ಮುಂದೆ ತಂದಿರುವ ತಿದ್ದುಪಡಿಯ ಉದ್ದೇಶವಾದರೂ ಕೂಡ ಕಾರ್ಪೊರೇಷನ್ನಿಗೆ ಏನು ಗೌರವವಿತ್ತು, ಏನು ಬೆಲೆ ಇತ್ತು ಅದೆಲ್ಲವನ್ನೂ ಕೂಡ ಮಣ್ಣುಗೂಡಿಸತಕ್ಕ ತಿದ್ದುಪಡಿ ಇದು ಎಂದು ಬಹಳ ಒತ್ತಾಯ ಪೂರ್ವಕವಾಗಿ ಸೂಚನೆ ಮಾಡ ಬಯಸುತ್ತೇನೆ.

ಬಹಳ ಸುಲಭವಾಗಿ ಮಾನ್ಯ ಸಚಿವರು ಹೇಳಿದರು, ಕೆಲವು ಕಾರ್ಪೊರೇಷನ್ ಆಸ್ತಿಪಾಸ್ತಿಗಳ ಅಸೆಸ್‌ಮೆಂಟ್ ವಿಚಾರದಲ್ಲಿ ಮತ್ತು ಸ್ಟ್ಯಾಂಡಿಂಗ್ ಕಮಿಟಿಗಳಿಂದಾಗಿ ಉಂಟಾಗಿರತಕ್ಕ ರೀತಿ ನೀತಿ ವಿಧಾನಗಳ ಬಗ್ಗೆ ಮತ್ತು ವಾಟರ್ ಸಪ್ಲೈ ಮತ್ತು ಸ್ಯೂಯರೇಜ್ ಬೋರ್ಡಿನವರು ಜೊತೆಯಲ್ಲಿ ಕಾರ್ಪೊರೇಷನ್ ಮಾಡತಕ್ಕ ಏನಾದರೂ ಒಪ್ಪಂದದ ಬಗ್ಗೆ ಕೊಂಚ ಅನಾನುಕೂಲತೆಗಳಿದ್ದು ಇವೆಲ್ಲವನ್ನೂ ನೇರ ಮಾಡುವುದಕ್ಕೆ, ಇವೆಲ್ಲವನ್ನೂ ಸರಿ ಮಾಡುವುದಕ್ಕೆ ಈ ತಿದ್ದುಪಡಿಯನ್ನು ನಾನು ಮಂಡಿಸುತ್ತಿದ್ದೇನೆಂದು ಹೇಳಿದರು. ಇವೆಲ್ಲವನ್ನೂ ನೇರಾ ಮಾಡುವುದಿರಲಿ, ಇವೆಲ್ಲವನ್ನೂ ಮತ್ತಷ್ಟು ಹದಗೆಡಿಸತಕ್ಕ ಕೆಲಸವನ್ನು ಈ ಸರ್ಕಾರದವರು ಮಾಡ ಹೊರಟಿದ್ದಾರೆಂದು ನನಗಾದರೂ ಅನ್ನಿಸುತ್ತದೆ.

ಮೊಟ್ಟ ಮೊದಲನೆಯದಾಗಿ Supersession of the Corporation. ಇದನ್ನು 47ನೆ ವಿಧಿಯ ಪ್ರಕಾರ, ಕಾರ್ಪೊರೇಷನ್ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ನಮಗೆ ಸಮಾಧಾನವಾದಾಗ, ಯಾರು ಆ ಕ್ಷಣದಲ್ಲಿ ಅಧಿಕಾರದಲ್ಲಿರುತ್ತಾರೆ ಅವರಿಗೆ ಸಮಾಧಾನವಾದಾಗ ಕಾರ್ಪೊರೇಷನ್‌ಅನ್ನು ರದ್ದುಗೊಳಿಸಿ ಅದಕ್ಕೆ ಬದಲಾಗಿ ಅಗತ್ಯ ಬಿದ್ದರೆ ವಿಶೇಷ ಅಡ್ವೈಸರಿ ಕೌನ್ಸಿಲ್ ನೇಮಕ ಮಾಡಿ ಆ ಅಡ್ವೈಸರಿ ಕೌನ್ಸಿಲ್ ಕಾರ್ಪೊರೇಷನ್ನಿನ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗತಕ್ಕದ್ದು ಎಂದು ಇದೆ. 1''-15 ವರ್ಷಗಳು ಬೇಕೆ ಈ ಒಂದು ಅನುಭವ ನಿಮಗೆ ಬರಬೇಕಾದರೆ ? 15 ವರ್ಷಗಳ ಕಾಲ ಈ ಕಾರ್ಪೊರೇಷನ್ ಮಾಡಬೇಕಾದುದನ್ನು ಮಾಡಿದೆ, ಬೇಕಾದಷ್ಟು ಮಾಡ ಬಾರದುದನ್ನೂ ಮಾಡಿರಬಹುದು. 15 ವರ್ಷಗಳು ಸುಮ್ಮನೆ ಇದ್ದು ಇದ್ದಕ್ಕಿದ್ದ ಹಾಗೇ ಮಾನ್ಯ ಆರ್. ಎಂ. ಪಾಟೀಲ್ ಅವರಿಗೆ ಗೋಚರವಾಯಿತು 1965ರಲ್ಲಿ, ಈ ಕಾರ್ಪೊರೇಷನ್ ಸರಿಯಾಗಿ ಕೆಲಸ ಮಾಡದೆ ಹೋದರೆ ಅದನ್ನು ರದ್ದು ಮಾಡತಕ್ಕ ಅಧಿಕಾರ ಸರ್ಕಾರಕ್ಕೆ ಬೇಕು, ಅದಕ್ಕೋಸ್ಕರ ಈ ಕಾರ್ಪೊರೇಷನ್ ಮಸೂದೆಗೆ ತಿದ್ದುಪಡಿಯನ್ನು ತರಬೇಕು ಎಂದು. ಈ ತಿದ್ದುಪಡಿಯಲ್ಲಿ ಅದನ್ನು ಪ್ರಾಮುಖ್ಯವಾಗಿ ತೋರಿಸಿದ್ದಾರೆ. ಸ್ಥಳೀಯ ಸಂಸ್ಥೆಗಳಿಗೆ ಇರಬೇಕಾದ ಜವಾಬ್ದಾರಿಯನ್ನು, ಹೊಣೆಗಾರಿಕೆಯನ್ನು ಏನು ಒಂದು ಕೈಯಿಂದ ಕೊಟ್ಟಿದ್ದೀರಿ ಅದನ್ನು ಇನ್ನೊಂದು ಕೈಯಿಂದ ಕಿತ್ತುಕೊಳ್ಳುವುದಕ್ಕೆ ಏನು ಅಧಿಕಾರ ಬೇಕೋ ಅದೆಲ್ಲವನ್ನೂ ಕೂಡ ಈ ಮಸೂದೆಯಲ್ಲಿ ನೀವು ಜೋಡಿಸಿ ಇಟ್ಟುಕೊಂಡಿದ್ದೀರಿ.

ಎರಡನೆಯದು, ಯಾವಾಗ ಬೇಕಾದರೂ ಕಾರ್ಪೊರೇಷನ್ನಿಗೆ ಸೇರಿರತಕ್ಕ ಆಸ್ತಿಪಾಸ್ತಿಗಳನ್ನು ಸರ್ಕಾರದವರು ತೆಗೆದುಕೊಳ್ಳಬಹುದು ಎನ್ನುವ ವಿಧಿಯನ್ನು ಕೂಡ ಸೇರಿಸಿದ್ದಾರೆ.

> "It shall be competent to Government from time to time by notification to take over any land or other property vested or vesting in the Corporation under this Act on such terms as the Government may determine."

ಸ್ವಾಮಿ, ಮಾನ್ಯ ಸಚಿವರ ನೆನಪು ಸ್ವಲ್ಪ ಕಡಮೆ ಇದ್ದರೂ ಕೂಡ ನಾವು ಕಳೆದ ವರ್ಷದಲ್ಲಿ ನಡೆದಂಥ ಘಟನೆಗಳನ್ನು ಮರೆಯಲಿಕ್ಕೆ ತಯಾರಿಲ್ಲ. ಸರ್ಕಾರಕ್ಕೂ ಮತ್ತು ಹಿಂದಿನ ವರ್ಷ ಕಾರ್ಪೊರೇಷನ್ನಿನಲ್ಲಿ ಆಡಳಿತ ಪಕ್ಷವಾಗಿದ್ದಂಥ ಪೌರ ಸಮಿತಿಗೂ ಬಂದಂಥ ಹಲವಾರು ಬಿಕ್ಕಟ್ಟುಗಳಲ್ಲಿ ಒಂದು ಪ್ರಾಮುಖ್ಯವಾದಂಥ ಬಿಕ್ಕಟ್ಟು ಎಂದರೆ, ಸರ್ಕಾರ ಮತ್ತು ಕಾರ್ಪೊರೇಷನ್ ಇವರಿಬ್ಬರ ನಡುವೆ ಆಸ್ತಿಪಾಸ್ತಿಗಳ ವಿಲೇವಾರಿ. ಕಾರ್ಪೊರೇಷನ್ ಆಸ್ತಿಯ ಮೇಲೆ ಸರ್ಕಾರಕ್ಕೆ ನೇರವಾದ ಮತ್ತು ಪರೋಕ್ಷವಾದ ಅಧಿಕಾರ ಅಥವಾ ಒಡೆತನವೇನಾದರೂ ಇದೆಯೋ ಎಂಬ ಪ್ರಶ್ನೆಯ ಬಗ್ಗೆ ಹಿಂದಿನ ಮೇಯರ್ ಅವರಿಗೂ ಮತ್ತು ಸರ್ಕಾರಕ್ಕೂ ಸಾಕಾದಷ್ಟು ಭಿನ್ನಾಭಿಪ್ರಾಯ ಬಂದಿತ್ತು. ಈ ಒಂದು ಭಿನ್ನಾಭಿಪ್ರಾಯವನ್ನೇ ಆಧಾರವಾಗಿಟ್ಟುಕೊಂಡು ಅದನ್ನು ವೃದ್ಧಿ ಮಾಡಬೇಕೆಂದು ಈ ದಿವಸ ಈ ತಿದ್ದುಪಡಿಯಲ್ಲಿ ಇಂಥಿಂಥ ಪ್ರಾಮುಖ್ಯವಾದಂಥ ವಿಧಿಬಂಧಗಳನ್ನು ಇವರು ಸೇರಿಸಿ ನಾಳೆ ದಿವಸ ಸರ್ಕಾರದವರ ಡಿಸ್ಕ್ರಿಷನ್ನಿಗೆ ಹಾಗೂ ಸರ್ಕಾರದ ದಾಕ್ಷಿಣ್ಯಕ್ಕೆ ಈ ಕಾರ್ಪೊರೇಷನನ್ನು ಒಳಪಡಿಸಿಕೊಳ್ಳತಕ್ಕ ಉದ್ದೇಶವನ್ನು ಇದರಲ್ಲಿ ಹಾಕಿಕೊಂಡಿದ್ದಾರೆ. ಇದು ನಿಜವಾಗಿ ಒಳ್ಳೆಯದೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇದು

ಆದರ್ಶನೀಯವೇ ? ನಾವು ಸರ್ಕಾರದಿಂದ ಒಳ್ಳೆಯದನ್ನು ನಿರೀಕ್ಷಿಸಿಲ್ಲವೆಂದು ಜನ ಹೇಳುತ್ತಾರೆ. ನಾವೂ ಸಹ ಹಾಗೆಯೇ ಹೇಳಬೇಕಾಗಿದೆ. ಇವರು ಆದರ್ಶಗಳನ್ನು ಬಿಟ್ಟು ಎಷ್ಟೋ ದಿವಸ ಗಳಾಯಿತು ಎಂದು ಕಾಣುತ್ತದೆ. ಆ ಮಾತನ್ನು ಶ್ರೀಮಾನ್ ಬಸಪ್ಪನವರು ತಲೆ ಆಡಿಸುತ್ತಿರು ವುದನ್ನು ನೋಡಿದರೆ ಅವರು ನನ್ನ ಅಭಿಪ್ರಾಯವನ್ನು ಒಪ್ಪಿದ್ದಾರೆಂದು ಕಾಣುತ್ತದೆ. ಈ ಸರ್ಕಾರ ದಿಂದ ಯಾರೂ ಒಳ್ಳೆಯದನ್ನು ನಿರೀಕ್ಷಿಸಲಾರರು ಎಂದು ಹೇಳಬಹುದು. ದೇಶದಲ್ಲಿ ಅಗುತ್ತಿರತಕ್ಕ ಕೆಟ್ಟದ್ದನ್ನು ಬೆಳೆಸುವುದಕ್ಕೆ ಇವರು ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ನಾನು ಒಪ್ಪಿದೆ ಎಂದು ಏಕೆ ಹೇಳಿದರೋ ಗೊತ್ತಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ನಾನು ಮಾತನಾಡುತ್ತಿದ್ದಾಗ ತಲೆ ಅಲ್ಲಾಡಿಸಿ ದುದನ್ನು ಕಂಡು ಅವರಿಗೆ ಕೆಲವು ಸಮಯವಾದರೂ ಒಳ್ಳೆಯ ಬುದ್ಧಿ ಬರುತ್ತದೆ ಎಂದು ನಾನು ತಿಳಿಯುತ್ತೇನೆ. ಏಕೆಂದರೆ, ಕೆಲವು ಸಮಯದಲ್ಲಿ ನಾನು ಹೇಳಿದ್ದನ್ನು ಆ ಮಾನ್ಯ ಸದಸ್ಯರು ಒಪ್ಪುತ್ತಾರೆ.

ಇನ್ನು 1965ನೇ ಇಸವಿಯಲ್ಲಿ ಕಾರ್ಪೊರೇಷನ್ ಸ್ಟ್ಯಾಂಡಿಂಗ್ ಕಮಿಟಿಗಳಿಗೆ ಚುನಾವಣೆ ನಡೆದುವು. ಆ ಸ್ಟ್ಯಾಂಡಿಂಗ್ ಕಮಿಟಿಗಳ ಚುನಾವಣೆಯ ಅವಧಿ ಇಷ್ಟಿಷ್ಟು ಎಂದು ನಿರ್ಧಾರ ವಾಗಿತ್ತು. ಇಂತಹ ಬಹಳ ಪ್ರಾಮುಖ್ಯವಾದಂಥ ಸ್ಟ್ಯಾಂಡಿಂಗ್ ಕಮಿಟಿಗಳಿಗೆ ಪೂರಾ ಸಂವಿಧಾನ ವಿಧಿಯಿಂದ ಆರಿಸಿ ಬಂದಂಥ ಅಧ್ಯಕ್ಷರು ಇದ್ದರು. ಇವರ ಸರಳವಾದ ಈ ತಿದ್ದುಪಡಿಯ ಪ್ರಕಾರ ಆ ಸ್ಟ್ಯಾಂಡಿಂಗ್ ಕಮಿಟಿಗಳನ್ನು ರದ್ದುಮಾಡಿ ಹೊಸದಾಗಿ ಏನೋ ಮಾಡಬೇಕೆಂದು ಹೊರಟಿದ್ದಾರೆ. The provision of Section 19 of the principal Act as amended by section 3 of this Act shall be applicable to the Standing Committees of this Corporation—stand dissolved after a period 15 days from the date of commencement of this Act—ಎಂದು ಹೇಳಿದೆ. ಕೇವಲ 15 ದಿವಸಗಳವರೆಗೆ ಈಗ ಅದರ ಅವಧಿಯನ್ನು ನಿಗದಿ ಮಾಡಿದ್ದಾರೆ. ಈಗಿರತಕ್ಕ ಸ್ಟ್ಯಾಂಡಿಂಗ್ ಕಮಿಟಿಗಳನ್ನು ನೆಲಸಮ ಮಾಡಿ ಬೇರೆ ರೀತಿಯಲ್ಲಿ ಇವರು ಏರ್ಪಾಡು ಮಾಡುತ್ತಿದ್ದಾರೆ. ಯಾರು ಇದನ್ನು ದುರುದ್ದೇಶವಲ್ಲ ವೆಂದು ಬೆಂಬಲ ಕೊಡುವುದಕ್ಕೆ ಸಾಧ್ಯವೆನ್ನುವುದನ್ನು ಮಾನ್ಯ ಸದಸ್ಯರು ಆಲೋಚನೆ ಮಾಡ ಬೇಕಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಬೆಂಗಳೂರು ಜನಗಳಮೇಲೆ ಅದರಲ್ಲೂ ಬೆಂಗಳೂರು ಸಿಟಿಯಲ್ಲಿ ವಾಸ ಮಾಡುತ್ತಾ ಇರತಕ್ಕ ಅಸಂಖ್ಯಾತ ನಾಗರಿಕರಮೇಲೆ ಈ ದಿವಸ ಸರ್ಕಾರದ ಕ್ರೂರದೃಷ್ಟಿ ಬಿದ್ದಿದೆ ಎಂದು ಹೇಳಬಹುದು. ಹಿಂದೆ ದೆಹಲಿಯಿಂದ ಬಂದಂಥ ಮಂತ್ರಿಗಳ ಮುಂದೆ ಬೆಂಗಳೂರಿನ ನಾಗರೀಕರು ಒಂದು ಸಾರಿ ಖಾಲಿ ಬಿಂದಿಗೆ ಹಾಗೂ ಕೊಡಗಳನ್ನು ತಲೆಯಮೇಲೆ ಇಟ್ಟುಕೊಂಡು ನೀರು ಬೇಕು ಎಂಬುದಾಗಿ ಪ್ರಾರ್ಥನೆಯನ್ನು ಸಲ್ಲಿಸಿದ್ದೂ ಆಯಿತು. ಅನಂತರ ಆಹಾರ ಕೊರತೆ ಬೇರೆ ಬಂತು. ಅದೂ ಅಲ್ಲದೆ ಕಾವೇರಿಯಿಂದ ಬೆಂಗಳೂರಿಗೆ ನೀರನ್ನು ಸರಬರಾಜು ಮಾಡುವ ಜವಾ ಬ್ದಾರಿಯನ್ನು ನಾವೇ ವಹಿಸಿ ಕೊಂಡಿದ್ದೇವೆಂದು ಸುಮಾರು 2-3 ವರ್ಷಗಳಿಂದಲೂ ಇವರು ಹೇಳು ತ್ತಲೇ ಬಂದಿದ್ದಾರೆ. ಇದರಿಂದ ನಾವು ಎಷ್ಟೋ ಸಂತೋಷಪಟ್ಟೆವು. ಏನಾದರೇನು ಬೆಂಗಳೂರಿನ ನಾಗರೀಕರು ನೀರಿನ ಕೊರತೆಯನ್ನು ಇನ್ನೂ ಅನುಭವಿಸುತ್ತಲೇ ಇದ್ದಾರೆ. ಅದು ನಿವಾರಣೆ ಯಾಗುವ ಒಳ್ಳೆಯ ದಿನಗಳು ಹತ್ತಿರ ಬರುತ್ತಿವೆಯೆಂದು ಅನೇಕರು ಯೋಚನೆ ಮಾಡುತ್ತಿದ್ದರು. ಆದರೆ ಇದುವರೆಗೂ ಅಂತಹ ಒಳ್ಳೆಯ ದಿನಗಳು ಬರಲೇ ಇಲ್ಲ. ಆದರೆ ಬೆಂಗಳೂರಿನಲ್ಲಿ ವಾಸ ಮಾಡತಕ್ಕ ಜನಗಳಿಗೆ ಬರುತ್ತಾ ಇರತಕ್ಕ ವಾಟರ್ ಮತ್ತು ಸ್ಯುಯರೇಜ್ ಬೋರ್ಡಿನ ನೀರಿನ ಬಿಲ್ ಗಳು ಈ ದಿವಸ ಎಷ್ಟೆಂಬುದು ಬೆಂಗಳೂರಿನಲ್ಲಿ ಈ ದಿವಸ ಯಾರ್ಯಾರು ಬಾಡಿಗೆ ಕೊಡುತ್ತಿದ್ದಾರೋ, ಯಾರ್ಯಾರು ಸ್ವಂತ ಮನೆಗಳನ್ನು ಹೊಂದಿದ್ದಾರೋ ಅಂತಹವರಿಗೆ ಚೆನ್ನಾಗಿ ಗೊತ್ತಿದೆ. ಬೇಕಾದಷ್ಟು ಜನರು ಶಾಸನ ಸಭಾ ಸದಸ್ಯರಾದ ನಮ್ಮಲ್ಲಿಗೆ ಬಂದು ವಾಟರ್ ಮತ್ತು ಸ್ಯುಯರೇಜ್ ಬೋರ್ಡಿನ ವಾಟರ್ ಬಿಲ್‌ಗಳನ್ನು ತೋರಿಸಿದ್ದಾರೆ. ಅವು ಒಂದಕ್ಕೊಂದು ಸಂಬಂಧವೇ ಇಲ್ಲ. ಅವನ್ನು ನೋಡಿದ ಪಕ್ಷದಲ್ಲಿ ಅವರ ಮನೆ ಬಾಡಿಗೆ 50 ರೂಪಾಯಿಗಳು ತಿಂಗಳಿಗಾದರೆ ವಾಟರ್ ಬಿಲ್ 100-120 ರೂಪಾಯಿಗಳು ತಿಂಗಳಿಗೆ ಬಂದಿರುವುದು ಕಾಣುತ್ತದೆ. ಯಾವ ತಿಂಗಳಿಗೆ ಎಷ್ಟೆಂದು ನಮೂದು ಮಾಡಿರುವುದು ಅವರ ಬಿಲ್‌ನಿಂದ ಗೊತ್ತಾಗುವುದಿಲ್ಲ. ಇಟ್ಟಾರೆ ಇಷ್ಟು ಮೊಬಲಗು ಕೊಡಬೇಕು, ಇಷ್ಟು ದಿವಸಗಳಲ್ಲಿ ಆ ಹಣವನ್ನು ಪೂರ್ತಿಯಾಗಿ ಕೊಡದೇ ಹೋದರೆ ಮನೆಯ ನಲ್ಲಿ ಕಿತ್ತುಹಾಕುತ್ತೇವೆ ಎನ್ನುವುದೇ ಅಲ್ಲ, ಮನೆಗೆ ನೀರೇ ಬಿಡುವುದಿಲ್ಲವೆಂದು ಹೇಳುತ್ತಾರೆ. ಹೀಗೆ ಬೆಂಗಳೂರಿನಲ್ಲಿ ನೀರಿಗೆ ಇಂತಹ ಸಂಚಕಾರವನ್ನು ತಂದಿದ್ದಾರೆ. ಶಾಸಕರಿಗಂತೂ ಅತಿಥಿಗೃಹಗಳಿವೆ, ಮಂತ್ರಿಗಳಿಗಂತೂ ದೊಡ್ಡ ದೊಡ್ಡ ಬಂಗಲೆಗಳಿವೆ. ನಮಗೂ ಅವರಿಗೂ ನೀರಿನ ಬಿಲ್‌ಗಳನ್ನು

(ಶ್ರೀ ಎಸ್. ಎಂ. ಕೃಷ್ಣ)

ಕೊಡುವ ಅವಶ್ಯಕತೆಯೇ ಇಲ್ಲ. ಅದು ತಪ್ಪಿಹೋಗಿದೆ. ಆದರೆ ಈ ದಿವಸ ಲಕ್ಷಾಂತರ ಜನ ಯಾರು ಗುಡಿಸಲುಗಳಲ್ಲಿ ವಾಸ ಮಾಡುತ್ತಿದ್ದಾರೋ ಯಾರು ಸಣ್ಣ ಸಣ್ಣ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೋ ಅಂತಹವರಿಗೆ ಇದರಿಂದ ಎಷ್ಟು ದೊಡ್ಡ ಅಪಕಾರವಾಗಿದೆ, ಎಂತಹ ದೊಡ್ಡ ಅನಾನುಕೂಲವೂ ಆಗಿದೆ ಎನ್ನುವುದನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕಾಗಿದೆ ಮತ್ತು ಅದನ್ನು ಸುಧಾರಿಸಬೇಕಾಗಿದೆ. ಮಾನ್ಯ ಸಚಿವರು ಒಂದು ವಾದವನ್ನು ಈ ದಿವಸ ಹೂಡಲಿಲ್ಲ. ಹಿಂದೆ ಅಂತಹ ಒಂದು ವಾದವನ್ನು ಹೂಡಿದ್ದರು. ವರ್ಲ್ಡ್ ಬ್ಯಾಂಕಿನವರು ನಮಗೇನಾದರೂ ಸಹಾಯ ಮಾಡಬೇಕಾದರೆ ಮೊದಲು ಕಾರ್ಪೊರೇಷನ್ನಿನವರಿಗೂ ಮತ್ತು ವಾಟರ್ ಮತ್ತು ಸ್ಯುಯೇಜ್ ಬೋರ್ಡಿನವರಿಗೂ ಒಂದು ಒಪ್ಪಂದವಾಗಬೇಕು ಎಂದು. ಆ ಒಪ್ಪಂದದ ಪ್ರಕಾರ ಅವರು ಇಷ್ಟು ಹಣವನ್ನು ನೀರಿಗೋಸ್ಕರ ಕೊಡಬೇಕೆಂದಿತ್ತು. ಆಗ ಮಾತ್ರ ಒಪ್ಪಂದಕ್ಕೆ ಸಹಿ ಹಾಕಬೇಕೆಂಬ ವಾದವನ್ನು ನಮ್ಮ ಮುಂದೆ ಇಟ್ಟಿದ್ದರು. ನಾನು ಇದರಿಂದ ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳುತ್ತೇನೆ. ವರ್ಲ್ಡ್ ಬ್ಯಾಂಕಿನವರೇನಾದರೂ ಇಂತಹ ಪ್ರಾಜೆಕ್ಟಿಗೆ ಇಷ್ಟು ಹಣವನ್ನು ಕೊಡುತ್ತೇವೆಂದು ಮುಂದೆ ಬಂದಾಗ ಆ ಕೆಲಸಕ್ಕೆ ಸಂಚಕಾರ ಮಾಡಿ ಈ ದೇಶದಲ್ಲಿ 18 ವರ್ಷಗಳಿಂದಲೂ ಹಲವಾರು ಕಡೆಗಳಲ್ಲಿ ನಡೆದಿರತಕ್ಕ ಕೆಟ್ಟ ಸಂಗತಿಗಳನ್ನು ಇವರು ನೆನಪಿನಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಈಗ ಹೊಸದಾಗಿ ಈ ಸ್ಥಳೀಯ ಸಂಸ್ಥೆಗಳೊಡನೆ ಸರ್ಕಾರದೊಡನೆ ಏನಾದರೂ ಒಪ್ಪಂದ ಮಾಡಿಕೊಳ್ಳಬೇಕು ಎಂದು ಇದ್ದಾರೆ. ಇನ್ನೂ ಅವಕಾಶ ಬದ್ದರೆ ಆ ಒಪ್ಪಂದದ ಪ್ರಕಾರ ಈ ಮಸೂದೆಯ ಎಲ್ಲಾ ವಿಧಿಗಳನ್ನೂ ಬಹಳ ಸೂಕ್ಷ್ಮವಾಗಿ ಇವರು ಪರೀಕ್ಷೆ ಮಾಡುತ್ತಿದ್ದಾರೆ. ಈಗ ಈ ಮಸೂದೆ ವಿಧಿಗಳೆಲ್ಲವನ್ನೂ ಅವರ ಅನುಕೂಲಕ್ಕೆ ತಕ್ಕ ಹಾಗೆ ಮಾಡಿ ಏನು ಉದ್ದೇಶಗಳನ್ನು ಅವರು ಇಟ್ಟುಕೊಂಡಿದ್ದಾರೋ ಆ ಉದ್ದೇಶಗಳು ಸಾರ್ಥಕವಾಗುವ ರೀತಿಯಲ್ಲಿ ಒಪ್ಪಂದಗಳು ತಯಾರು ಇದ್ದರೆ ಆಗ ಮಾತ್ರ ವರ್ಲ್ಡ್ ಭ್ಯಾಂಕಿನವರೇ ಆಗಲೀ ಅಥವಾ ಮತ್ತೊಂದು ಏಜೆನ್ಸಿಯೇ ಆಗಲೀ ಮುಂದೆ ಬಂದು ಹಣ ಸಹಾಯ ಮಾಡುತ್ತಾರೆ. ಅಂದಮಾತ್ರಕ್ಕೇ ಇವರು ಜನಗಳಿಗೆ ಸಂಚಕಾರವನ್ನುಂಟುಮಾಡಿ ವಿಪರೀತ ತೊಂದರೆ ಮಾಡಬೇಕೆಂದು ಅರ್ಥವಲ್ಲ. ಸರ್ಕಾರದವರು ಏನೇ ಒಪ್ಪಂದವನ್ನಾದರೂ ವರ್ಲ್ಡ್ ಬ್ಯಾಂಕಿನವರಲ್ಲಿ ಮಾಡಿಕೊಳ್ಳಲಿ, ಆ ಒಪ್ಪಂದದ ದೃಷ್ಟಿ ಅಥವಾ ಉದ್ದೇಶ ಬೆಂಗಳೂರಿನ ಜನಗಳಿಗೆ ಅನುಕೂಲ ಹಾಗೂ ಕಲ್ಯಾಣವಾಗಬೇಕೆಂಬ ಎರಡು ಉದ್ದೇಶಗಳಾಗಿ ಇರಬೇಕು. ಇವನ್ನು ಬಿಟ್ಟು ಇನ್ನು ಯಾವ ಉದ್ದೇಶವಿದ್ದರೂ ಅರ್ಥರಹಿತ ಅಥವಾ ಅರ್ಥಹೀನವಾಗುತ್ತದೆ. ಬೆಂಗಳೂರಿನ ನಾಗರೀಕರು ಈಗಾಗಲೇ ಎಷ್ಟೋ ತ್ಯಾಗಮಾಡಿದ್ದಾರೆ. ಇನ್ನೂ ತ್ಯಾಗಮಾಡಲಿಕ್ಕೆ ಸಿದ್ಧರಿದ್ದಾರೆ. ಆದರೂ ಅವರು ಬಹಳಮಟ್ಟಿಗೆ ರೋಸಿಹೋಗಿದ್ದಾರೆ. ಅವರಿಗೆ ಈಗ ಜಾಗೃತಿ ಬರುತ್ತಾ ಇದೆ. ನೇರವಾಗಿ ಕ್ರಮ ತೆಗೆದುಕೊಳ್ಳುವುದರಲ್ಲೂ ಕೂಡ ಎಷ್ಟೋ ಜನ ಎಷ್ಟೋ ದಿವಸಗಳ ಹಿಂದಿನಿಂದಲೂ ತಯಾರಾಗಿದ್ದಾರೆ. ಸುಮಾರು 15–20 ದಿವಸಗಳ ಕೆಳಗೆ ಹಲವಾರು ಸಮಿತಿಗಳವರು ಈ ಬಗ್ಗೆ ಒಂದು ದೊಡ್ಡ ಆಂದೋಳನವನ್ನೇ ಎಬ್ಬಿಸಿದರು. ಉಪವಾಸಗಳನ್ನೂ ಸಹ ಮಾಡಿ ಸರ್ಕಾರದ ಮತ್ತು ಜನತೆಯ ಗಮನವನ್ನು ಈ ಸಮಸ್ಯೆಯ ಕಡೆಗೆ ಎಳೆದಿದ್ದಾರೆ.

ಶ್ರೀ ಆರ್. ಎಂ. ಪಾಟೀಲ್.—ಅವರ ಸಲುವಾಗಿಯೇ ಇದನ್ನು ಮಾಡಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣ.—ಅದಕ್ಕಾಗಿಯೇ ಬೆಂಗಳೂರಿನ ಜನತೆಯ ದೃಷ್ಟಿಯನ್ನು ಆ ಸಮಸ್ಯೆ ಕಡೆಗೆ ಎಳೆದಿದ್ದೇವೆ. ಈ ಸಮಸ್ಯೆ ಬಂದ ಮೇಲೆ ಇವರು ಮಾಡಿರತಕ್ಕ ಪರಿಹಾರೋಪಾಯ ಬಹಳ ಸಂಕಟವನ್ನುಂಟು ಮಾಡುವ ಹಾಗೆ ಇದೆ.

ಶ್ರೀ ಆರ್. ಎಂ. ಪಾಟೀಲ್.—ಅನೇಕರು ಅದನ್ನು ಒಪ್ಪಿದ್ದರು. ಶ್ರೀಮಾನ್ ನಾಗಣ್ಣನವರೂ ಸಹ ಒಪ್ಪಿದ್ದರು.

ಶ್ರೀ ಎಸ್. ಎಂ. ಕೃಷ್ಣ.—ಇಲ್ಲಿ ಈ ತಿದ್ದುಪಡಿಯನ್ನು ತರುವುದಕ್ಕೆ ಮೊದಲು ಸರ್ಕಾರದವರು ಸಂಬಂಧಪಟ್ಟ ಕಾರ್ಪೊರೇಷನ್ನಿನವರ ಅಭಿಪ್ರಾಯವನ್ನು ಪಡೆಯಬೇಕಾಗಿತ್ತು. ಕಾರ್ಪೊರೇಷನ್ನಿನವರ ಅಭಿಪ್ರಾಯವನ್ನು ಪಡೆಯದೆ ಇಂಥಾ ಒಂದು ಪ್ರಾಮುಖ್ಯವಾದ ತಿದ್ದುಪಡಿಯನ್ನು ಕಾರ್ಪೊರೇಷನ್ ಆಕ್ಟಿಗೆ ತಂದಿರತಕ್ಕಂಥಾದ್ದು ಒಂದು ದೊಡ್ಡ ಅಪರಾಧ ಎಂದು ನಾನು ಪರಿಗಣಿಸುತ್ತೇನೆ. ಆದ್ದರಿಂದ ಈ ತಿದ್ದುಪಡಿಯನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳಬೇಕು, ಮತ್ತು ಇದನ್ನು ವಾಪಸು ತೆಗೆದುಕೊಂಡಮೇಲೆ ಸಂಬಂಧಪಟ್ಟ ಸಂಸ್ಥೆಯೊಡನೆ ಮತ್ತು ಆಸಕ್ತ ಜನರೊಡನೆ ಚರ್ಚೆ ಮಾಡಿ ಯಾವುದಾದರೂ ಒಂದು ಒಪ್ಪಂದಕ್ಕೆ ಬಂದು ಸರ್ವರಿಗೂ ಸಮಂಜಸವಾಗಿ ಆಗತಕ್ಕಂಥ ರೀತಿಯಲ್ಲಿ ಜನಗಳಿಗೆ ನ್ಯಾಯ ದೊರೆಯತಕ್ಕ ರೀತಿಯಲ್ಲಿ ಈ

ತಿದ್ದುಪಡಿಯನ್ನು ಪರಿಷ್ಕಾರ ಮಾಡಿ ಮತ್ತೆ ಅವಶ್ಯಬಿದ್ದರೆ ಈ ಸಭೆಯ ಮುಂದೆ ಇಂಥಾ ತಿದ್ದುಪಡಿಯನ್ನು ತರಬೇಕು ಎಂದು ಹೇಳಿ ಬಹಳ ಕಠಿಣವಾಗಿ ಮತ್ತು ಬಹಳ ಉಗ್ರವಾಗಿ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

MR. SPEAKER.—The Debate will go on till 4 O'clock. At 4-00 P.M. the Hon'ble Minister will reply and the Bill will be put to vote. There are two amendments for consideration.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ಸ್ವಾಮಿ, ಈ ವಿಧೇಯಕದ ಬಗ್ಗೆ ಈಗಾಗಲೇ ಮಾತನಾಡಿದ ಮಾನ್ಯ ಸದಸ್ಯರು ಹೇಳಿದ ವಿಚಾರಗಳನ್ನು ಬಿಟ್ಟು ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಮಾನ್ಯ ಸಚಿವರು ಈ ಮಸೂದೆಯ ರೂಪ ರೇಖೆಗಳನ್ನು ವಿವರಣೆ ಮಾಡುವಾಗ ಕೆಲವು ವಿಷಯಗಳನ್ನು ಹೇಳಿದರು. ಅವರು ಹೇಳಿದಷ್ಟೇ ವಿಷಯಗಳಾಗಿದ್ದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಅಷ್ಟು ತೊಂದರೆಗಳು ಇರುವುದಿಲ್ಲ; ಎಂದು ಕಾಣುತ್ತದೆ. ಆದರೆ ಇದರಲ್ಲಿ ಕೆಲವು ಮೂಲಭೂತ ಪ್ರಶ್ನೆಗಳು ಎದ್ದು ಕಾಣುತ್ತವೆ. ಅದನ್ನು ನಾವು ಹೇಳಬೇಕಾಗುತ್ತದೆ. ಇದಕ್ಕೆ ಹಿನ್ನಲೆ ಎಲ್ಲರಿಗೂ ಗೊತ್ತಿದೆ. ಈಗ ಪ್ರಾಪರ್ಟಿ ಟ್ಯಾಕ್ಸನ್ನು 10 ಪರ್ಸೆಂಟ್ ಇರುವುದನ್ನು 20 ಪರ್ಸೆಂಟ್ ಮತ್ತು 15 ಪರ್ಸೆಂಟ್ ಇರುವುದನ್ನು 25 ಪರ್ಸೆಂಟ್ ಮಾಡಬೇಕೆಂದು ಹೇಳಿ ಪ್ರಾವಿಜನ್ ಮಾಡಿಕೊಡುತ್ತಿದ್ದಾರೆ.

[MR. DEPUTY SPEAKER in the Chair.]

If it is the intention of the Government to make provision for the enhancement of the property tax as and when the property taxes are revised or as and when properties appreciate in value, I can understand. For that purpose if it is raised from 15 to 25 per cent, I can understand.

SRI R. M. PATIL.—By splitting, what will happen? Please see how the old tax was split up. Out of 13 to 15 per cent, how was it split up? So, even when we are keeping the minimum at 15 per cent, we are charging only 1½ per cent.

SRI K. S. SURYANARAYANA RAO.—If it is maximum 15 per cent, the difference is 1½ per cent. But, the base here is 15 per cent, and 25 per cent is the maximum.

SRI R. M. PATIL.—There is no question of maximum. It has to be accepted in due course if they feel like doing so. For the purpose of making lumpsum payment of water, if we charge at the present rate, they have no objection.

SRI K. S. SURYANARAYANA RAO.—I can understand the point. What I suggest is, let the base be 10 per cent. Let it range from 10 to 25. I have no objection. Small houses are built and poor people live in huts, where they need water supply. Unless there is Municipal assessment you don't give water. The minimum that one has to pay to get water connection is 15 per cent and not 10 per cent. Therefore, I do not mind if the maximum is 25 per cent but let the minimum at 10 per cent. If it is raised the people who come for the first time will be hit hard. If the people who have means and can afford to pay let them pay but such of those who cannot afford to pay, the minimum should be less. This is so far as taxation proposal is concerned.

As far as water tax is concerned, I may straightaway come to the point and ask the Minister. The Government have constituted a Board.

(SRI K. S. SURYANARAYANA RAO)

The argument advanced for constituting the Board was that the World Bank comes into the picture and therefore a separate enactment is necessary. You have constituted the Electricity Board. What have you done ? The Government reserves the right so far as generation of power is concerned. Only administration and distribution are done by the Board. Likewise instead of creating another huge revenue machinery for the purpose of administering this Board, keep for yourself the responsibility of making available sufficient quantity of water at a particular point for distribution in the city and entrust the distribution to the Corporation which has been doing this all these years. Possibly for th last sixty years the Corporation has been doing it and there is no difficulty. Their difficulty has been the scarcity of water. Therefore you augment the sources of water and make available that water to the Corporation at a rate to be determined by the party. It is not out of place if I say that the rate of water supplied is another big problem. It has been assessed by experts that the cost of water per thousand gallons may not exceed 8.5 annas or 10 annas. The Corporation at one stage accepted it even at one rupee. Even then your were not prepared to entrust. But you have fixed a slab rate varying from one rupee to 1. 30 which runs to lakhs more than what you need. The administration of Board is sought to be put at 125 lakhs. By your rate of charging; it realises about 145 to 150 lakhs. Therefore, when you say that you want to run it on no profit no loss basis, why do you make this profit ? For the existing system why do you charge more. I can understand by that if you are going to give some additional benefits. For the existing system, for the moneys already spent, why do you charge more ? For the moneys you give to the Corporation for the grants given you charge interest. Is this the way to calculate ? There has been an expert Committee to go into this question and why not accept that proposition ? Why not you entrust this distribution of water to the Corporation which is managing it at a very low cost instead of spending 145 lakhs ? They can manage in about 50 or 55 lakhs. Therefore nearly a crore of rupees will be saved to the corporation which they can use for giving amenities to the citizens. Therefore the amendment proposed to make this payment to the Board or Government is not justified on facts. I would request the Government to reconsider this mater.

3-00 P.M.

Sir, the other point I would like to mention so far as the payment of tax is this. The bicycle tax was being collected by the Corporation. It is the representatives of the people who represent the Corporation as you and I represent in this House. They decided that they shall not henceforth collect the bicycle tax. It is for them not to collect the tax. But the Government did not agree. When they found that the Corporation is adament, circumvent this situation it became an obligation on

the owner of the bicycle to pay it himself. This cycle tax is trifle thing; it was not giving them a very big revenue. To augment their own resources there are several means. Even the one amendment that you have suggested is more than sufficient to offset the revenue by the Bicycle tax. This became a prestige issue. Why should you make it obligatory on the part of the tax payer to pay it immediately he purchases the bicycle in the market? If everybody pays the tax without interference it is the best, because the administration cost will be the least. Therefore, let it be said that it is open to the Corporation not to levy a particular tax; then I can concede the point. Let it be the obligation on the part of the vehicle owner to pay for the vehicle, but let there be discretionary power vested with the Corporation. Let it be within the jurisdiction of the Corporation to decide. While we amend the Act, we should look into it from a very objective point of view. Today we may be in power; tomorrow we may not be in power. It should stand the test of time. For Acts and Bills passed some years ago, we have not been able to find one substitute for those things. With such motives we must frame the laws, but not to suit our conveniences and whims and fancies, not to suit a particular contingency that has arisen. Therefore, the proposed amendment is not based on any scientific basis.

Another point, I would like to mention is with regard to the Corporation. We call the Mayor as Worshipful Mayor". But to what position are we reducing him to under this Act? All correspondence pass through the Mayor. Perhaps, I should not degrade him—he is not as good as a Chairman of a Panchayat, with this amendment.

SRI C. J. MUCKANNAPPA.—Sir, he has not become a Chairman of the Village Panchayat. The Chairman of a Village Panchayat is more powerful,

SRI K. S. SURYANARAYANA RAO.—The point is this. When we create an office, supposing if you don't give respect to the Minister, who else is going to give respect to the Government? The office becomes what we make of it. Greate sanctity is attached to the place of the Hon'ble Speaker. Supposing today, we pollute it, it is lost. Instead of raising the prestige of the office, a more responsible office along with prestige, if we could bring it down, it brings down our own prestige, prestige of the common man. It is our own responsibility to raise him to a better standard. Is this the way we do it? Therefore, Sir, it is hardly becoming of any Government to interfere with the function and powers of the Worshipful Mayor. We clamour for the Corporation to be formed, because prestige is attached to it. So, we must not look at the Bill from the subjective point of view. I believe, the Hon'ble Minister could take an objective point of view of the whole situation. He can have a realistic view of the situation.

Sir, so far as the appeals are concerned, the Divisional Commissioner comes in. What is the difficulty in the present system being there? In

(SRI K. S. SURYANARAYANA RAO)

between the Corporation and its Committees the Divisional Commissioner comes in. Why should we create too many interferences ? It is just perhaps with vengeance, I should say-because I do not find any other word-that this amending Bill is sought to be introduced. If it is for streamlining the administration, it is welcome. In view of all those things, I wish better sense will prevail and the Hon'ble Minister will take some more time or even refer this matter to a Select Committee. which could go into all aspects of the case, and bring it before the House in a better form.

Thank you, Sir.

† SRI G. V. GOWDA.—Mr. Speaker, Sir, I reiterate my stand taken when I raised the point of order that it is improper that the Government must have considered and again brought a Bill of this nature, especially, when it obtains the approval of this House for withdrawal of a Bill having similar contents, Endorsing everything that my friend Sri Suryanarayana Rao has said, I wish to say that a tendencey is developing in the mind of the Government to cripple all the powers that are found in the local body institutions. Sir, we are all aware of the direction in the Constitution, that the State must endeavour to see that all the Panchayatraj Institutions develop, make them independent and see that they become responsible to the local areas. It is with that intention that all States have been endeavouring to constitute these local bodies in the cities, towns and local areas. Another reason is, that it is very necessary in Indian States to decentralise power to the maximum extent possible so that things could be regulated properly.

Sir, we see very many amendments have been suggested here. It looks as if the Government wants to take whatever little power that this Corporation has. Nowhere I have found, in any Indian State, an attempt being made to take such stringent measures as proposed here, especially in the matter of supersession. If the party in power makes up its mind to supersede any local body or corporation when persons not belonging to the ruling party are in power in the local bodies, it is easy for them to apply this provision of supersession.

"If, in the opinion of the Government, the Corporation is not competent to perform......" Sir, who is the competent authority to justify that a certain Corporation has become incompetent ? Can Government say that a particular action of the Corporation amounts to incompetence ? The Corporation might have done it in the interest of the people of that area. If Government thinks it otherwise, they can supersede the Corporation. Sir, I should say that there is no precedent of this kind anywhere in India. Probably, here, when Mysore does it, Bombay may follow or Madras may follow. But, is it desirable to set up a precedent like this ? Municipal Corporations are bodies which are constituted to administer the affairs of big cities like Bangalore, Hubli-Dharwar, etc. If Government interferes in all these matters, naturally,

cities having a population of 3 or 5 or 6 lakhs may not be anxious to request Government to convert them into Corporation because it will in no way be different from the City Municipality.

Then Sir, it is said :

"......may supersede it for such period as may be specified in the order" Sir, a definite period is not fixed. It is open for Government to take over the administration even for ten years. This goes against the very root of democracy even assuming that a particular corporate body fails to perform the functions as contemplated under the provisions of the Act. This is brought only with an ulterior motive. They do not want to see that the Corporation functions with any other party, and every institution from the Croporation to the Village Panchayat should be manned only by the people belonging to the ruling party. That seems to be the falacy that appears to have developed. The party in power at the Government level may be something ; but, so far as local bodies are concerned, there may be a different party. Only, there must be co-ordination between the two. But, to think to have whether in the local bodies or panchayats, people belonging to the ruling party is not very conciliable.

Sir, so far as amendment to section 19 is concerned, I do not understand why one member cannot be elected for two Standing Committees. Why should any member be prohibited from this? There is also the restriction that it is only for one year.

Sir, in the original Act it was advisedly suggested that all correspondence should be sent to Government through the Mayor. Now the Commissioner is sought to be the fulcrum to send the correspondence to Government. Should not the Mayor know what is going on between the Government and the Commissioner ? The Mayor as well as the members are entitled to know how the affairs are being administered. If the power vested in the Mayor that all correspondence must go though him, is taken away, I do not know what is the ulterior motive behind it and what purpose is going to be served !

So far as the new amendment to Section 47B is concerned, this is a new thing. Such a provision is there in the Mysore Village Panchayats Act and also in the Mysore Municipalites Act and it is necessary that such a provision should be there in the Corporation Act also. Till the next election is held, members who are there have got to continue and then only it becomes an obligation on the part of the authorities who conduct the election to hold the election in time. Similarly, in the case of stay, the body that is functioning at the moment should be allowed to function till the stay order is vacated and till new election is held. Similarly, if the term of office of the councillors has expired, till the next election is held the sitting councillors should be allowed to continue. The reasons mentioned here are so flimsy that it would not justify the appointment of an Administrator under any circumstances.

(SRI G. V. GOWDA)

Then I come to the amendment to section 72. Section 72 deals with the Acquisition of Property. Now they want the Commissioner to acquire for Government also. Is it the obligation of the Commissioner to do that ? The Commissioner has been purposely sent to the Corporation to deal with the affairs of the Corporation and not the affairs of the Government. If the Government want any property to be acquired there are several officers of Government, Why should we empower the the Commissioner to acquire property for Government ? I do not understand the soundness of this amendment.

Then Section 74A is a new amendment. Sub-section (2) says :

> "It shall be competent to the Government from time to time by notification, to take over any land or other property vested or vesting in the Corporation under this Act, on such terms as the Government may determine."

When once the Government transfer the property to the Corporation, it becomes vested in the Corporation. Where is the need for the Government again by notification to say that they are going to take over that property? When once it is given it becomes the property of the Corporation. Unless the Corporation is in a position to manage the property, the Government should not interfere and take away that property by notification. Under the Transfer of Property Act when the transfer is effected, the transferee gets the right and the right is automatically vested in the transferee and the transferor loses all the right. But now they want to add that the ownership shall not be transferred unless the terms and conditions laid down are complied with. This is opposed to the principles of Transfer of Property Act.

With these observations I submit that many of the amendments proposed are unnecessary and they cripple the powers now vested in the Corporation. The Corporation is the highest body and the office of Mayor should be given the highest respect. Nothing should be done to lower the prestige of the office, whoever may occupy it.

†ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ 1966ನ್ನು ಮಾನ್ಯಮಂತ್ರಿಗಳು ಈ ಸಭೆಯಲ್ಲಿ ಮಂಡಿಸಿದಾರೆ. ಈ ಅಮೆಂಡ್‌ಮೆಂಟ್ ಬಿಲ್, ಕಾರ್ಪೊರೇಷನ್ ಪರವಾಗಿ ತಂದದ್ದು, ಒಂದು ರೀತಿಯಲ್ಲಿ ಬೆಂಗಳೂರು ಕಾರ್ಪೊರೇಷನ್ನಿಗೂ ಮತ್ತು ಸರ್ಕಾರದ ಹಾಗೂ ಬೆಂಗಳೂರು ವಾಟರ್ ಸೂಯೆರೇಜ್ ಬೋರ್ಡಿಗೂ ಒಂದು ದೊಡ್ಡ ಅಂತರವನ್ನು ಕಡಿಮೆ ಮಾಡುವುದಕ್ಕೆ ಸಹಾಯವಾಗಿದೆಯೆಂದು ಹೇಳಬಲ್ಲೆ.

ಒಂದನೇ ವಿಚಾರದಲ್ಲಿ ಕಾರ್ಪೊರೇಷನ್ನಿನಲ್ಲಿ ಬೆಂಗಳೂರು ವಾಟರ್ ಸಪ್ಲೈ ಸೂಯೆರೇಜ್ ಸ್ಕೀಮ್ ಬೋರ್ಡ್ ವಶಕ್ಕೆ ವಾಟರ್ ಮತ್ತು ಸ್ಯಾನಿಟೇಷನ್ ಚಾರ್ಜುಗಳನ್ನು ಕಾರ್ಪೊರೇಷನ್ ಕಂದಾಯದ ಜೊತೆಯಲ್ಲಿ ವಾಟರ್ ಟ್ಯಾಕ್ಸ್ ಸ್ಯಾನಿಟೇಷನ್ ಸೆಸ್ ಸೇರಿಸಿ ವಸೂಲು ಮಾಡುತ್ತಿದ್ದಾರೋ ಗೊತ್ತಿಲ್ಲ. ಯಾವಾಗ ಬೆಂಗಳೂರು ವಾಟರ್ ಸಪ್ಲೈ ಸೂಯೇಜ್ ಸ್ಕೀಮ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ ತಮ್ಮ ವಶಕ್ಕೆ ತೆಗೆದುಕೊಂಡರೋ ಅಂದಿನಿಂದ ಕಾರ್ಪೊರೇಷನ್ ಆಕ್ಟ್

ಅಮೆಂಡ್‌ಮೆಂಟ್ ಬಂದು ವಾಟರ್ ಸೆಸ್ ಮತ್ತು ಸ್ಯಾನಿಟರಿ ಸೆಸ್ ವಸೂಲು ಮಾಡುವ ಅಧಿಕಾರ ರದ್ದಾಯಿತು. ಇದರಿಂದಾಗಿ ಕಾರ್ಪೊರೇಷನ್ ಅವರು ಆನ್ಯುಯಲ್ ವ್ಯಾಲ್ಯುಯೇಷನ್ 500 ರೂಪಾಯಿಗೆ ಮೇಲ್ಪಟ್ಟು ಇರುವ ಮನೆಗಳಿಗೆ ವಾಟರ್ ಸೆಸ್ ಮತ್ತು ಸ್ಯಾನಿಟೇಷನ್ ಸೆಸ್ ಸೇರಿ 15 ಪರ್‌ಸೆಂಟ್ ವಸೂಲು ಮಾಡುತ್ತಿದ್ದಾರೆ, ಕಂದಾಯದ ಜೊತೆಯಲ್ಲಿ. 500 ರೂಪಾಯಿಗಿಂತ ಆನ್ಯುಯಲ್ ವ್ಯಾಲ್ಯುಯೇಷನ್ ಕಮ್ಮಿಯಿದ್ದರೆ ಅದರಲ್ಲಿ ಹದಿಮೂರೂವರೆ ಪರ್‌ಸೆಂಟ್ ವಸೂಲು ಮಾಡುತ್ತಿದ್ದಾರೆ. ಈ ವಾಟರ್ ಬೋರ್ಡ್ ಬಂದ ಮೇಲೆ ಇದನ್ನು ವಸೂಲು ಮಾಡುವ ಅಧಿಕಾರ ಕಾರ್ಪೊರೇಷನ್ ತೆಗೆದುಕೊಂಡಿತು. ಆಮೇಲೆ ತಮ್ಮ ಟ್ಯಾಕ್ಸನ್ನು ಕೂಡ ವಸೂಲು ಮಾಡಿ ಹದಿಮೂರುವರೆಯಿಂದ ಹತ್ತು ಪರ್‌ಸೆಂಟ್‌ಗೆ ವಸೂಲು ಮಾಡುವುದಕ್ಕೆ ಪ್ರಾರಂಭ ಮಾಡಿದರು. ಇದರಿಂದ ಕಂದಾಯದ ಹೆಚ್ಚಿನ ಉತ್ಪತ್ತಿ ಕಾರ್ಪೊರೇಷನ್ನಿಗೆ ಬರುತ್ತಿದೆ. ನೀರಿನ ಸಂಬಂಧ ಸ್ಯಾನಿಟೇಷನ್ ಸಂಬಂಧ ಕಾರ್ಪೊರೇಷನ್ನಿಗೆ ಬರಲಿಲ್ಲ, ವಾಟರ್ ಬೋರ್ಡಿಗೂ ಹೋಗಲಿಲ್ಲ. ಜನಗಳಲ್ಲಿಯೇ ಉಳಿಯಿತು. ವಸೂಲು ಮಾಡಲಿಲ್ಲ. ಇದರಿಂದಾಗಿ ಫ್ರೀ ವಾಟರ್ ಅಲೋಯನ್ಸ್ ಕೊಡುವ ವಿಚಾರದಲ್ಲಿ ಸರಿಯಾಗಿ ತೀರ್ಮಾನಕ್ಕೆ ಬರುವುದಕ್ಕಾಗಲಿಲ್ಲ. ವಾಟರ್ ಮತ್ತು ಸ್ಯಾನಿಟರಿ ಬೋರ್ಡಿಗೂ ಕಾರ್ಪೊರೇಷನ್ನಿಗೂ ಹಲವಾರು ತಿಂಗಳಲ್ಲಿ ನಡೆದ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಏನೊಂದು ತೀರ್ಮಾನಕ್ಕೆ ಬರುವುದಕ್ಕೆ ಅಸಾಧ್ಯವಾಯಿತು.

ಅಷ್ಟು ಮಾತ್ರವಲ್ಲದೆ ಕಾರ್ಪೊರೇಷನ್ ಮೇಯರ್ ಅವರು ಉಪಮೇಯರ್ ಅವರು ಮತ್ತು ಇತರರು ಬಂದು ಚರ್ಚೆಮಾಡಿ, ಫ್ರೀ ಅಲೋಯನ್ಸ್‌ಗೋಸ್ಕರ ಎಷ್ಟು ಪ್ರಯತ್ನ ಮಾಡಿದರೂ ವಾಟರ್ ಬೋರ್ಡಿಗೆ ಹಣ ಎಲ್ಲಿಂದ ಬರಬೇಕು ಎನ್ನುವುದು ಗೊತ್ತಾಗದೆ ಈ ವಿಚಾರದಲ್ಲಿ ಒಂದು ತೀರ್ಮಾನ ಮಾಡಿಕೊಳ್ಳುವುದಕ್ಕೆ ಇಷ್ಟರವರೆಗೆ ತಡವಾಗಿದೆ. ಸರ್ಕಾರ ಮತ್ತು ಕಾರ್ಪೊರೇಷನ್ ಜೊತೆಯಲ್ಲಿ ಈ ನೀರಿನ ವಿಚಾರದಲ್ಲಿ ಬಹಳ ಹಾಹಾಕಾರವೆದ್ದು ಸಹಜವಾಗಿ ಬಹಳ ದುಃಖವಾದ ವಿಚಾರವಾಗಿದೆ.

3.30 P.M.

ಈ ಅಮೆಂಡಿಂಗ್ ಬಿಲ್ ಬಂದುದರಿಂದ ಕಾರ್ಪೊರೇಷನ್‌ನಲ್ಲಿ 10-15 ಪರ್ಸೆಂಟ್ ವಸೂಲು ಮಾಡುವುದಕ್ಕೆ ಆಡಳಿತಕ್ಕೆ ಏನು ಅವಕಾಶವಿದೆಯೋ ಅದು 15ರಿಂದ 25ರವರೆಗೆ ವಸೂಲುಮಾಡಿ ಹೆಚ್ಚಿನ ಹಣವನ್ನು ಬರಮಾಡಿಕೊಂಡು ಅದರಿಂದ ಫ್ರೀ ಅಲೋಯನ್ಸಿಗೆ ಅವಕಾಶ ಕಲ್ಪಿಸಿಕೊಂಡಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದು ಒಂದು ಆದರೆ ಬೆಂಗಳೂರಿನ ನಗರವಾಸಿಗಳಿಗೆ, ರೇಟ್ ಪೇಯರ್ರಿಗೆ ನೀರಿನ ವಿಚಾರದಲ್ಲಿ ಈಗ ಏನು ತೊಂದರೆ ಇದೆ, ಅದು ಖಂಡಿತವಾಗಿಯೂ ನಿವಾರಣೆಯಾಗುತ್ತದೆ ಎಂದು ನನಗೆ ಭರವಸೆ ಇದೆ. ಅದರಿಂದ ಸಂಬಂಧಪಟ್ಟ ಅಧಿಕಾರಿಗಳೊಡನೆ ಹೊಡೆದಾಡುವುದಕ್ಕೆ ಅವಕಾಶವಿದೆ. ಎರಡನೆಯದಾಗಿ ಕಾರ್ಪೊರೇಷನ್ನಿನಲ್ಲಿ ಈ ನೀರಿನ ವಿಷಯದಲ್ಲಿ ಎಷ್ಟು ಜಿಜ್ಞಾಸೆ ಹುಟ್ಟಿದೆ, ಅದು ಇನ್ನು ಮುಂದೆ ಈ ಅಮೆಂಡ್‌ಮೆಂಟ್ ಆದ ಕೂಡಲೇ ಆದಷ್ಟು ಬೇಗ ಕೆಲವು ದಿನಗಳಲ್ಲೇ ನಿವಾರಣೆಯಾಗುತ್ತದೆ. ಇದರ ಇತ್ಯರ್ಥವನ್ನು ಮಾಡುವುದಕ್ಕೆ ಅವಕಾಶವಿದೆ. ಅಮೆಂಡ್‌ಮೆಂಟ್ ಇಂದು ಪಾಸ್ ಆದರೆ ಕಾರ್ಪೊರೇಷನ್ ಮತ್ತು ವಾಟರ್ ಬೋರ್ಡುಗಳು ಒಂದು ಕಡೆ ಸೇರಿ ತಮ್ಮ ತಮ್ಮ ವಿಚಾರಗಳನ್ನು ಇತ್ಯರ್ಥಮಾಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಕಾರ್ಪೊರೇಷನ್‌ನ ಬೇರೆ ವಿಚಾರದಲ್ಲಿ ಕೆಲವು ಅಮೆಂಡ್‌ಮೆಂಟ್‌ಗಳಿವೆ. ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ಒಬ್ಬ ಸದಸ್ಯನು ಒಂದು ಕಮಿಟಿಯಲ್ಲಿರಬೇಕೆಂದು ಅಮೆಂಡ್‌ಮೆಂಟ್ ಬಂದಿದೆ. ಪ್ರಾಯಶಃ ನಾನು ಕಾರ್ಪೊರೇಷನ್ನಿನಲ್ಲಿ 14 ವರ್ಷ ಸದಸ್ಯನಾಗಿದ್ದಾಗ, ಒಂದೊಂದು ಕಮಿಟಿಯಲ್ಲಿ ಐದ್ಹೈದು ವರ್ಷ ಇದ್ದುದು ನನ್ನ ಅನುಭವದಿಂದ ಹೇಳಬಹುದು. ಸಾಮಾನ್ಯವಾಗಿ ಒಬ್ಬ ಸದಸ್ಯನು ಹೆಚ್ಚು ಕಮಿಟಿಗಳಲ್ಲಿ ಇದ್ದರೆ ಬೇರೆ ಸದಸ್ಯರಿಗೆ ಅನುಕೂಲಗಳು ಸಿಗುತ್ತಿರಲಿಲ್ಲ, ಕಾರ್ಪೊರೇಷನ್‌ನಲ್ಲಿ ಬೇರೆ ಬೇರೆ ಅಭಿವೃದ್ಧಿ ಸಮಿತಿಗಳು ಇವೆ. ಆರೋಗ್ಯ ಸಮಿತಿ ಇದೆ, ವರ್ಕ್ಸ್ ಸಮಿತಿ ಇದೆ, ಎಲ್ಲಾ ಕಮಿಟಿಗಳು ಇವೆ. ಒಬ್ಬ ಸದಸ್ಯನು ಎರಡು ಮೂರು ಕಮಿಟಿಗಳಲ್ಲಿ ಇದ್ದದ್ದೇ ಆದರೆ, ಆಗ ಅಲ್ಲಿ ತುಂಬಾ ಇನ್‌ಫ್ಲುಯನ್ಸಿಗೆ ಅವಕಾಶ ಇದೆ. ಉದಾಹರಣೆಗೆ ಟೌನ್ ಪ್ಲಾನಿಂಗ್, ಮತ್ತು ಇಂಪ್ರೂವ್‌ಮೆಂಟ್ ಕಮಿಟಿಯಲ್ಲಿ ಸದಸ್ಯನಾಗಿದ್ದರೆ, ಸೈಟ್ ಕೊಡುವುದಕ್ಕೆ ಒಬ್ಬ ಅರ್ಜಿ ಮಾಡಿದ್ದರೆ, ಅದನ್ನು ಶಿಫಾರಸುಮಾಡಿ ಮುಂದೆ ಅತನೇ ಟ್ಯಾಕ್ಸೇಶನ್ ಫೈನಾನ್ಸ್ ಕಮಿಟಿಯಲ್ಲಿ ಒತ್ತಾಯಮಾಡಿ ಕೊಡಿಸುವ ಸಂದರ್ಭ ಇದೆ. ಪ್ರತಿಯೊಬ್ಬರಿಗೂ ಸಂಬಂಧಪಟ್ಟ ವಿಷಯ. ಈ ನಡೆಯಲ್ಲಿ ನಾನು ಯಾವ ರೀತಿಯ ಪಕ್ಷಕ್ಕೆ ಅಥವಾ ಸಂಸ್ಥೆಗೆ ಸಂಬಂಧಪಟ್ಟ ವಿಚಾರ ಮಾತನಾಡುತ್ತಾ ಇಲ್ಲ. ಈ ಅಮೆಂಡ್‌ಮೆಂಟನ್ನು ತಂದದ್ದು ಬರೇ ಈ ಮಂತ್ರಿಮಂಡಲಕ್ಕೆ ಸಂಬಂಧಪಟ್ಟ ಹಾಗೆ ಅಲ್ಲ, ಅದು ನಾಳೆ ಇನ್ನೊಂದು ಬೇರೆ ಮಂತ್ರಿಮಂಡಲ ಬಂದರೂ, ಇನ್ನೊಂದು

(ಶ್ರೀ ಕೆ. ದೇವಯ್ಯ)

ಕಾರ್ಪೊರೇಷನ್ ಮೇಯರ್ ಎಲೆಕ್ಟ್ ಆಗಿ ಬಂದರೂ, ಅವರಿಗೂ ಅನ್ವಯಿಸುತ್ತದೆ. ಇವತ್ತು ಇದರ ಪ್ರಕಾರ ಮೇಯರ ಹಕ್ಕು ತೆಗೆದುಹಾಕಿದಂತಾಗುತ್ತದೆ. ಕಾರ್ಪೊರೇಷನ್ ಸರ್ಕಾರ ದೊಡನೆ ಮಾಡುವ ಕರೆಸ್ಪಾಂಡೆನ್ಸ್ ಎಲ್ಲಾ ಕಮಿಷನರ್ ಮಾಡಬೇಕೆಂದು ತಿದ್ದುಪಡಿ ಇದೆ; ಇದರಿಂದ ಮೇಯರಿಗೆ ಇದ್ದಂತಹ ಹಕ್ಕು ಹೋಗುತ್ತದೆ. ಇದು ದೇಶದ ದೃಷ್ಟಿಯಿಂದ, ಜನಗಳ ಹಿತದೃಷ್ಟಿಯಿಂದ ಕೆಲಸ ಮಾಡಬೇಕೇ ವಿನಾ ಬೇರೆ ಯಾವ ದೃಷ್ಟಿ ಅಥವಾ ಪ್ರಭಾವಕ್ಕೊಳಗಾಗಿ ಕೆಲಸ ಮಾಡಕೂಡದು ಎಂದು ನನ್ನ ಮನಸ್ಸಿಗೆ ಕಾಣುತ್ತದೆ. ಯಾವ ಒಂದು ಕೆಲಸ ಮಾಡ ಬೇಕಾದರೂ ಆಯಾ ಕಾಲದಲ್ಲಿ ಬಿಸಿ ಬಿಸಿಯಾಗಿ ನೆರವೇರಿಸುವುದಕ್ಕೆ ಮತ್ತು ಅದರ ಆಗುಹೋಗು ಗಳನ್ನು, ಅದರ ಫಲಿತಾಂಶಗಳನ್ನು ಜನತೆಗೆ ಹಂಚುವುದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿ ಕೊಂಡು ಸರ್ಕಾರ ಮತ್ತು ಜನತೆಯು ಮುಂದಿಟ್ಟುಕೊಂಡು ಕೆಲಸ ಮಾಡತಕ್ಕದ್ದು ಸೂಕ್ತ ಮತ್ತು ಯೋಗ್ಯವಾದುದು ಎಂದು ನಾನು ಭಾವಿಸುತ್ತೇನೆ. ನಾವು ನಮ್ಮ ದೇಶದ ಸ್ವಾತಂತ್ರ್ಯವನ್ನು ಗಳಿಸುವುದಕ್ಕೆ ತುಂಬಾ ಕಷ್ಟಪಟ್ಟಿದ್ದೇವೆ. ಈಗ ದೇಶದ ಮುಂದೆ ಏನು ಕಷ್ಟಗಳು, ತೊಂದರೆಗಳು ಇವೆ, ಅವನ್ನು ನಾವು ಎದುರಿಸಬೇಕಾದುದು ನಮ್ಮ ಕರ್ತವ್ಯ. ದೇಶದಲ್ಲಿರುವ ಬಡತನವನ್ನು ಹೋಗಲಾಡಿಸಬೇಕು. ಕೈಗಾರಿಕೆಗಳ, ವ್ಯವಸಾಯಗಳ ಅಭಿವೃದ್ಧಿಯಾಗಬೇಕು, ಮತ್ತು ದೇಶ ದಲ್ಲಿ ಎಲ್ಲರಿಗೂ ಮೂರು ಹೊತ್ತು ಇಲ್ಲವಾದರೆ ಕನಿಷ್ಟ ಎರಡು ಹೊತ್ತಾದರೂ ಅನ್ನ ಸಿಗುವಂತಾಗ ಬೇಕು......

ಶ್ರೀ ಕೆ. ಪಿ. ರೇವಣ ಸಿದ್ದಪ್ಪ (ತಿಪಟೂರು).—ಸ್ವಾಮಿ, ಬಹಳ ಮುಖ್ಯವಾದ ವಿಚಾರದ ಬಗ್ಗೆ ಭಾಷಣ ನಡೆಯುತ್ತಿರುವಾಗ ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಮಂತ್ರಿಗಳಿಗೆ ತೊಂದರೆಪಡಿಸು ತ್ತಿದ್ದಾರೆ.

Mr. SPEAKER.—There is no point of order. When we are short of time, raising of points of order of this type is not proper.

ಶ್ರೀ ಕೆ. ದೇವಯ್ಯ.—ಖಂಡಿತವಾಗಿಯೂ ಈ ಅಮೆಂಡ್‌ಮೆಂಟ್ ಒಂದು ವರ್ಷದ ಹಿಂದೆ ಬಂದಿದ್ದರೆ, ಬೆಂಗಳೂರಿನಲ್ಲಿ ಇದ್ದಂತಹ ನೀರಿನ ಅಭಾವವನ್ನು ಸುಧಾರಿಸುವುದಕ್ಕೆ ಮತ್ತು ಪರಿಹರಿ ಸುವುದಕ್ಕೆ ಆಗುತ್ತಿತ್ತು ಎಂದು ನಾನು ಇಲ್ಲಿ ಘಂಟಾಘೋಷವಾಗಿ ಹೇಳುತ್ತೇನೆ. ಅಧಿಕಾರ ಸ್ಥಾನದಲ್ಲಿ ಇದ್ದಾಗ ಒಂದು ಧೋರಣೆ, ಅದರಿಂದ ಹೊರಗೆ ಬಂದಾಗ ಇನ್ನೊಂದು ಧೋರಣೆಯನ್ನು ಅನುಸರಿಸುವುದು ನಮಗೂ ನಮ್ಮ ಸಮಾಜಕ್ಕೂ ಹಿತಕರವಲ್ಲ, ನಿಜವಾಗಿಯೂ ಸಾರ್ವಜನಿಕ ಕ್ಷೇತ್ರ ದಿಂದ ಚುನಾಯಿತರಾಗಿ ಬಂದು, ಬೆಂಗಳೂರಿನ ಪ್ರಥಮ ಪ್ರಜೆಯಾಗಿರುವ ಮೇಯರವರ ಹಕ್ಕು ಏನಿವೆ, ಅದು ಸ್ವಲ್ಪ ಇದರಿಂದ ಕುಂಠಿತವಾಗಿದೆ. ಅದನ್ನು ಮಾಡಬಾರದಿತ್ತು. ಇದನ್ನು ನಾನು ಖಂಡಿತವಾಗಿಯೂ ಅಂಗೀಕರಿಸುವುದಿಲ್ಲ. ಅದೇ ರೀತಿಯಲ್ಲಿ ಇನ್ನೂ ಕೆಲವು ಅಮೆಂಡ್‌ಮೆಂಟ್‌ಗಳು ಬಹಳ ಉಪಯೋಗಕರವಾಗಿವೆ. ಕಾರ್ಪೊರೇಶನ್ನಿನಲ್ಲಿ ಅತೀ ತ್ವರಿತ ವೇಗದಿಂದ ಕೆಲಸಕಾರ್ಯಗಳು ನಡೆಯಬೇಕು. ಆಗ ಸ್ಯಾಂಕ್ಷನ್ ಮಾಡುವ ಅಧಿಕಾರ ಕಾರ್ಪೊರೇಶನ್ನಿನಲ್ಲಿ ಇತ್ತು, ಕಮಿಟಿಗಳಲ್ಲಿ ಇತ್ತು. ಇದರ ಮಿತಿಯನ್ನು 5 ಸಾವಿರದಿಂದ 10 ಸಾವಿರ, 10 ಸಾವಿರದಿಂದ 25 ಸಾವಿರಕ್ಕೆ ಏರಿಸಿ 50 ಸಾವಿರದಿಂದ 2 ಲಕ್ಷಕ್ಕೆ ಏರಿಸಿ ಇದರಲ್ಲಿ ಕಮಿಟಿಗಳಿಗೆ ಮತ್ತು ಕಾರ್ಪೊರೇಶನ್ನಿಗೆ ಮತ್ತು ಕಮಿಶನ ರಿಗೆ ಅಧಿಕಾರವನ್ನು ವಿಂಗಡಿಸಿ ಕೊಟ್ಟಿದ್ದಾರೆ. ಇದು ಬಹಳ ಮುಖ್ಯವಾಗಿದೆ. ಉದಾಹರಣೆಗೆ ಒಂದು ಮಳೆ ಬಂದರೆ ಸಾವಿರಾರು ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಕಮಿಟಿಯಲ್ಲಿ ತೀರ್ಮಾನ ವಾಗಿ ಹಣ ಒದಗಿಸುವ ಸಮಯಕ್ಕೆ ಮನೆಗಳೆಲ್ಲಾ ಬಿದ್ದು ಹೋಗಿರುತ್ತವೆ. ಒಂದು ಉದಾಹರಣೆಗೆ ಹೇಳುವುದಾದರೆ, ಲಿಂಕ್ ರೋಡಿನಲ್ಲಿ ಎರಡು ವರ್ಷದ ಹಿಂದೆ ಮಳೆ ಬಂದು ನೀರು ನುಗ್ಗಿ ಅನೇಕ ಮನೆಗಳಿಗೆ ತೊಂದರೆಗಳಾಗಿದೆ. ಪರಿಹಾರಕ್ಕೋಸ್ಕರ ಮೂರು ಲಕ್ಷ ರೂಪಾಯಿ ಎಸ್ಟಿಮೇಟ್ ಮಾಡಿದ್ದಾರೆ. ಕೆಲಸವಾಗದೆ ಜನರಿಗೆ ತೊಂದರೆಯಾಗಿದೆ. ಇಂಥ ಸಂದರ್ಭಗಳಲ್ಲಿ ಕಮಿಟಿಗೆ ಅಧಿಕಾರವಿರುವುದರಿಂದ ಅದು ಬೇಗನೆ ಸ್ಯಾಂಕ್ಷನ್ ಆಗುವುದಕ್ಕೆ ಕಷ್ಟವಾಗುತ್ತದೆ. ಮತ್ತು ವಿಳಂಬ ವಾಗುತ್ತದೆ. ಈಗ ಕಮೀಷನರಿಗೆ ಅಧಿಕಾರ ಹೆಚ್ಚಿಸಿದುದು ಬಹಳ ಸಂತೋಷದ ಸಂಗತಿ. ಪ್ರಜಾ ಪ್ರಭುತ್ವದಲ್ಲಿ ಬೆಂಗಳೂರು ನಗರಕ್ಕೆ ಅಂತಹ ವಿಷಮ ಪರಿಸ್ಥಿತಿ ಬರುವುದಿಲ್ಲ ಎಂದು ನಂಬಿದ್ದೇನೆ. ಆದರೆ ಪ್ರಪಂಚದ ವಿವಿಧ ದೇಶಗಳಲ್ಲಿ ನಡೆಯುವ ಅರಾಜಕತೆಯನ್ನು ನೋಡಿದರೆ, ನಮ್ಮ ಭಾರತ ದೇಶದಲ್ಲಿ ಎಂತಹ ಸಂದರ್ಭ ಬಂದರೂ ಕೂಡ ಅದಕ್ಕನುಗುಣವಾಗಿ ನಡೆಯಲು ಅನುಕೂಲವಾಗು ವಂತೆ ಈ ಅಮೆಂಡ್‌ಮೆಂಟ್ ಯೋಗ್ಯವಾಗಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೂ ಕೂಡ ಸರ್ಕಾರ ಉಪಯುಕ್ತವಾದ ಒಳ್ಳೆಯ ಸಲಹೆಗಳನ್ನು ಯೋಚನೆ ಮಾಡಿ ಕಾರ್ಪೋ

ರೇಷನ್ನಿನ ಅಭಿಪ್ರಾಯವನ್ನು ಪಡೆದು ಆದಷ್ಟು ಒಳ್ಳೆಯತನದಿಂದ ನಡೆದುಕೊಳ್ಳಬೇಕು ಮತ್ತು ಸರ್ಕಾರ, ವಾಟರ್ ಬೋರ್ಡು ಅನ್ಯೋನ್ಯವಾಗಿ ನಡೆದು ದೇಶದ ಹಾಗೂ ಜನತೆಯ ವಿಶ್ವಾಸವನ್ನು ಗಳಿಸಬೇಕೇ ವಿನಹ ಒಂದು ಪಾರ್ಟಿ, ಒಂದು ಪಂಗಡ, ಒಂದು ಕಾರ್ಪೋರೇಶನ್ ಎನ್ನುವ ಅಭಿಪ್ರಾಯವನ್ನು ಇಟ್ಟುಕೊಂಡು ಕೆಲಸ ಕಾರ್ಯಗಳನ್ನು ಮಾಡಬಾರದು ಎಂದು ಸಲಹೆ ಮಾಡಿ, ಅಧ್ಯಕ್ಷರನ್ನು ವಂದಿಸಿ, ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—It is possible for the Chair to give chance to one more member.

Sri C. J. MUCKANNAPPA.—Please allow us half an hour to express our views on this Bill and forty-five minutes will be enough for getting clarifications.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಪೋಲೀಸ್ ಖಾತೆಯನ್ನು ಕಳೆದುಕೊಂಡು ದುರದೃಷ್ಟವಶಾತ್ ಈ ಸ್ಥಳೀಯ ಸಂಸ್ಥೆಗಳನ್ನು ನಡೆಸಿಕೊಂಡು ಹೋಗ ತಕ್ಕಂಥ ಜವಾಬ್ದಾರಿಯನ್ನು ವಹಿಸಿಕೊಂಡಿರತಕ್ಕಂಥ ಸಚಿವರು ಈ ಮಸೂದೆಯನ್ನು ತಂದಿದ್ದಾರೆ. ಅವರು ಪೋಲೀಸು ಇಲಾಖೆಯನ್ನು ಸಾಕಷ್ಟು ದರ್ಪದಿಂದ ನಡೆಸಿಕೊಂಡು ಹೋಗಿದ್ದಾರೆ. ಅವರ ಸ್ವರ ಮತ್ತು ಆಳತನ ಅವೆಲ್ಲವೂ ಆ ಇಲಾಖೆಗೆ ಸ್ವಲ್ಪಮಟ್ಟಿಗೆ ಒಪ್ಪುತ್ತಾ ಇತ್ತು. ಆದರೆ ಸ್ಥಳೀಯ ಸಂಸ್ಥೆಗಳ ದುರಾದೃಷ್ಟವೋ ಎಂಬಂತೆ, ಈಗ ತಾವು ಸ್ಥಳೀಯ ಸಂಸ್ಥೆಗಳ ಭವಿಷ್ಯವನ್ನು ನಿರ್ಧರಿಸುವ ಕಾರ್ಯದಲ್ಲಿ ತೊಡಗಿದ್ದೀರಿ, ಸ್ವಾಮಿ, ತಮಗೆ ಗೊತ್ತೇ ಇದೆ, ಕಳೆದ 18 ವರ್ಷಗಳಿಂದ ಕಾಂಗ್ರೆಸ್ ಪಕ್ಷ ಬೆಂಗಳೂರಿನ ಕಾರ್ಪೋರೇಷನ್ನಿನ ಆಡಳಿತವನ್ನು ವಹಿಸಿಕೊಂಡು ಹೋಗುತ್ತಾ ಇತ್ತು. ಹಿಂದೆ ಸ್ಥಳೀಯ ಸಂಸ್ಥೆಯ ಸಚಿವರು ಆಗಿದ್ದಂಥ ಮಾನ್ಯ ಶ್ರೀಮಾನ್ ಟಿ. ಸುಬ್ರಮಣ್ಯಂ ರವರು ಕಾಂಗ್ರೆಸ್ಸನ್ನು ಬಿಟ್ಟ ಮೇಲೆ ಅಥವಾ ಕಾಂಗ್ರೆಸ್ಸಿನಿಂದ ಅವರನ್ನು ಹೊರಗೆ ಹಾಕಿದ ಮೇಲೆ, ಅವರು ಬೆಂಗಳೂರು ನಗರದಲ್ಲಿ ಒಂದು ಪೌರಸಮಿತಿಯನ್ನು ರಚನೆ ಮಾಡಿ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸಿಬಿಟ್ಟರು, ಪೌರಸಮಿತಿಯವರು ಅಧಿಕಾರಕ್ಕೆ ಬಂದರು. ಆಗ ಸ್ವಲ್ಪ ಮಟ್ಟಿಗೆ ಸರ್ಕಾರಕ್ಕೂ, ಆಡಳಿತ ನಿರ್ವಹಿಸತಕ್ಕ ಕಾಂಗ್ರೆಸ್ಸೇತರ ಪೌರಸಮಿತಿಗೂ ಘರ್ಷಣೆಗಳು ಆದುವು. ಮುಖ್ಯವಾಗಿ ಉಚಿತ ನೀರು ಸರಬರಾಯಿ ಮೇಲೆ ನೀರು ಮತ್ತು ಒಳಚರಂಡಿ ಬೋರ್ಡು ಮತ್ತು ಕಾರ್ಪೋರೇಷನ್ನಿಗೂ ಹೊಂದಾಣಿಕೆ ಆಗಲಿಲ್ಲ. ಅದೇ ರೀತಿ ಸ್ಕೈಕಲ್ಲುಗಳ ಮೇಲೆ ತೆರಿಗೆಯನ್ನು ತೆಗೆದುಹಾಕಬೇಕು ಎಂದು ಕಾರ್ಪೋರೇಷನ್ ನಿರ್ಧಾರ ಮಾಡಿದ್ದನ್ನು, ಸರ್ಕಾರ ಕಾರ್ಯಗತ ಮಾಡುವುದಕ್ಕೆ ಬಿಡಲಿಲ್ಲ. ಹೀಗೆ ಅನೇಕ ಸಂದರ್ಭದಲ್ಲಿ ಸರ್ಕಾರಕ್ಕೂ, ಕಾರ್ಪೋರೇಷನ್ನಿಗೂ ಘರ್ಷಣೆಗಳು ಬಂದುವು. ಇವೊತ್ತು ನಾವು ಬಯಸುತ್ತಾ ಇರುವುದು ಏನು ಎಂದರೆ ಕೇಂದ್ರೀಕೃತ ಆಗಿರತಕ್ಕಂಥ ಅಧಿಕಾರ ಹಾಗೂ ಖರ್ಚು ಮಾಡತಕ್ಕಂಥ ಅಧಿಕಾರಿಗಳು ಸಾಧ್ಯವಾದ ಮಟ್ಟಿಗೂ ವಿಕೇಂದ್ರೀಕರಣವಾಗಬೇಕು, ಪಂಚಾಯಿತಿ ಮಟ್ಟದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಹಾಗೂ ನಗರ ಸಭೆಗಳ ಮಟ್ಟದಲ್ಲಿ ಜನ ಹೆಚ್ಚು ಹೆಚ್ಚು ಅಧಿಕಾರಗಳನ್ನು ನಿರ್ವಹಿಸಬೇಕು ಮತ್ತು ಹೆಚ್ಚು ಹಣವನ್ನು ಅವರು ಖರ್ಚು ಮಾಡುವಂತೆ ವ್ಯವಸ್ಥೆ ಮಾಡಬೇಕು ಎಂದು. ಜನತೆ ನೇರವಾಗಿ ಈ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಅವಕಾಶ ಇರಬೇಕು ಎನ್ನುವುದು. ಇದು ಸಾಮಾನ್ಯ ಪ್ರಜಾ ತಂತ್ರದ ಮೂಲ ಉದ್ದೇಶ. ಇದನ್ನು ಕಾಂಗ್ರೆಸ್ ಪಕ್ಷ ಸ್ವೀಕಾರ ಮಾಡಿದೆಯೆಂದು ನಾನು ತಿಳಿದು ಕೊಂಡಿದ್ದೇನೆ. ಸ್ವಾಮಿ, ಇವೊತ್ತು ಈ ವಿಧಾನಮಂಡಲಗಳನ್ನೂ ರಾಜ್ಯಸರ್ಕಾರಗಳನ್ನೂ ನೇತು ಹಾಕುವುದಕ್ಕೆ, ತೊಡೆದು ಹಾಕುವುದಕ್ಕೆ ರಾಷ್ಟ್ರಾಧ್ಯಕ್ಷರಿಗೆ ಅಧಿಕಾರ ಇದೆ. ಅದೇ ರೀತಿ ಕೇರಳ ದಲ್ಲಿ ರಾಷ್ಟ್ರಾಧ್ಯಕ್ಷರ ಅಧಿಕಾರ ಬಂತು. ಇವೊತ್ತು ನಮ್ಮ ರಾಜ್ಯ ಸರ್ಕಾರ ಹಾಕಿರುವ ಕರಭಾರ ಗಳು, ಅವರು ನಾಲ್ಕು ವರ್ಷ ಮಾಡಿದಂತ ಆಡಳಿತ ವೈಖರಿಯನ್ನು ನೋಡಿದರೆ, ನಿಜವಾಗಿ ಕೇಂದ್ರ ದವರು ಈ ಸರ್ಕಾರವನ್ನು ಸೂಪರ್‌ಸೀಡ್ ಮಾಡಿ, ಸರ್ಕಾರ ವಹಿಸಿಕೊಳ್ಳಬೇಕಾಗಿತ್ತೋ ಏನೋ ಎಂದು ನನಗೆ ಅನಿಸುತ್ತದೆ. ಆದರೂ ಅಂತಹ ಬೇಡಿಕೆಯನ್ನು ನಾವು ಮಂಡಿಸುವುದಿಲ್ಲ. ಇವೊತ್ತು ಅಲ್ಲ, ನಾಳೆಯಾದರೂ ಅವರು ತಿದ್ದಿಕೊಳ್ಳಬಹುದು ಎಂದು ನಮಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಒಂದೇ ಕಾರಣದಿಂದ ಇಂತಹ ಸರ್ಕಾರವನ್ನು ಸಹಿಸಿಕೊಂಡು ನಾವು ಮುಂದುವರಿಯು ತ್ತಿದ್ದೇವೆ. ಹಾಗೆ ಒಂದು ವೇಳೆ ಕಾಂಗ್ರೆಸ್ಸೇತರರು ಪೌರಸಭೆಯಲ್ಲಿ, ಪಂಚಾಯಿತಿಯಲ್ಲಿ ಅಥವಾ ತಾಲ್ಲೂಕ್ ಬೋರ್ಡ್‌ನಲ್ಲಿ ಯಾವುದೇ ಒಂದು ಕಡೆಯಲ್ಲಿ ಅಧಿಕಾರಕ್ಕೆ ಬಂದಾಗ, ಅಂತಹ ಅಧಿಕಾರ ವನ್ನು ಮೊಟಕು ಮಾಡತಕ್ಕದ್ದು ಬಹಳ ತಪ್ಪು. ಅದು ದೂರದೃಷ್ಟಿಯಿಂದ ರಹಿತವಾದುದು, ಮತ್ತು ಕೇವಲ ತಮ್ಮ ಒಂದು ಪಕ್ಷದ ಅಧಿಕಾರವನ್ನು ಚಲಾಯಿಸುವುದಕ್ಕೆ ಕಾನೂನಿನಲ್ಲಿ ಅವಕಾಶ

(ಶ್ರೀ ಎಸ್. ಗೋಪಾಲಗೌಡ)

ಇರಬೇಕು, ನಾವು ಹೇಳಿದಂತೆ ಕಾರ್ಪೊರೇಷನ್ ಆಗಲಿ, ಪಂಚಾಯಿತಿಯಾಗಲಿ, ಯಾವ ಚುನಾಯಿತ ಮಂಡಲಿಯೇ ಆಗಲಿ ಕೇಳಬೇಕು ಎನ್ನತಕ್ಕಂಥ ಒಂದೇ ಒಂದು ದೃಷ್ಟಿಯಿಂದ ಇಷ್ಟೊಂದು ತಿದ್ದುಪಡಿಗಳನ್ನು ಈ ಮಸೂದೆಗೆ ತರತಕ್ಕದ್ದು ಆಗಿದೆ.

ಸೆಕ್ಷನ್ 47(ಎ)ಯನ್ನು ಈಗಾಗಲೇ ಮಾನ್ಯ ಸಭೆಯ ಸದಸ್ಯರು ಗಮನಕ್ಕೆ ತಂದಿದ್ದಾರೆ. ಅದರಲ್ಲಿ ಕಾರ್ಪೊರೇಷನ್ ಸೂಪರ್‌ಸೀಡ್ ಮಾಡತಕ್ಕ ಅಧಿಕಾರವನ್ನು ತೆಗೆದುಕೊಂಡಿದ್ದಾರೆ. ಕಾರ್ಪೊರೇಷನನ್ನು ಸೂಪರ್‌ಸೀಡ್ ಮಾಡುವುದು ಒಂದೇ, ಕರ್ಣಾಟಕ ರಾಜ್ಯದ ಸರ್ಕಾರವನ್ನು ಸೂಪರ್‌ಸೀಡ್ ಮಾಡುವುದು ಒಂದೇ. ಅವರು 15 ಲಕ್ಷ ಆದರೆ ನಾವು 235 ಲಕ್ಷ ಜನ ಇದ್ದೇವೆ. ನಮ್ಮನ್ನು 47 ಕೋಟಿಗೆ ಹೋಲಿಸಿದರೆ ಇದೂ ಅಷ್ಟೆ ಕಾಣಿಸುತ್ತದೆ. ಆದುದರಿಂದ ಚುನಾವಣೆಯಾಗಿ ಬಂದಿರತಕ್ಕ ಜನವನ್ನು ತಳ್ಳಿಹಾಕುವುದಕ್ಕೆ ಅವರು ಏನು ತಪ್ಪು ಮಾಡಿದ್ದಾರೆ? ಜನಗಳ ಅಭ್ಯುದಯವನ್ನು ಅವರು ಬಯಸುವುದಿಲ್ಲವೇ! ಈ ಮಾತುಗಳನ್ನು ನಾವು ಸಹಿಸುವುದಕ್ಕಾಗುವುದಿಲ್ಲ. ಈ ಮಾತುಗಳನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಈ ತಿದ್ದುಪಡಿಯನ್ನು ಸರ್ಕಾರದವರು, ಎಲ್ಲೆಲ್ಲಿ ಕಾಂಗ್ರೆಸ್ಸೇತರ ಆಡಳಿತ ನಡೆಯುತ್ತಿದೆಯೋ ಅವುಗಳನ್ನು ಸೂಪರ್‌ಸೀಡ್ ಮಾಡುವ ಉದ್ದೇಶದಿಂದ ತಂದಿದ್ದಾರೆ ಎಂದು ನಾವು ಇವತ್ತು ಅಪಾದನೆ ಮಾಡಬೇಕಾಗಿದೆ, ಅಥವಾ ಸ್ಥಳೀಯ ಸಂಸ್ಥೆಗಳಲ್ಲಿರುವವರು ಆಡಳಿತದಲ್ಲಿ ಇರತಕ್ಕಂಥವರು ಹೇಳಿದಂತೆ ಕೇಳುವುದಿಲ್ಲ, ನಮ್ಮ ಕೈಗೊಂಬೆಗಳು ಆಗುವುದಿಲ್ಲ ಎನ್ನುವ ಕಾರಣದಿಂದ ಈ ತಿದ್ದುಪಡಿಯನ್ನು ತಂದಿದ್ದೀರಿ ಎಂದು ಭಾವಿಸಬೇಕಾಗುತ್ತದೆ. ಸ್ವಾಮಿ, ಬೆಳೆಯುತಕ್ಕ ಬೆಂಗಳೂರು ನಗರಕ್ಕೆ ಕಾವೇರಿನದಿಯ ನೀರನ್ನು ತರಬೇಕು ಎನ್ನುವುದು ದೊಡ್ಡ ಯೋಜನೆ ಈ ನಗರ ಬಹಳ ದೊಡ್ಡದಾಗಿ ಬೆಳೆಯುತ್ತಿದೆ. ಅದನ್ನು ಕಾರ್ಪೊರೇಷನ್ ನೇರವಾಗಿ ನಿರ್ವಹಿಸಲಾರದು ಮತ್ತು ಚರಂಡಿ ವ್ಯವಸ್ಥೆ ಬಹಳ ಬೃಹತ್ ಪ್ರಮಾಣದಲ್ಲಿ ಆಗಬೇಕಾದರೆ ಒಂದು ಮಂಡಲಿಯನ್ನು ಪ್ರಾರಂಭ ಮಾಡಿದರು. ಈ ಮಂಡಲಿಯವರು, 1958ನೇ ಇಸವಿಯಿಂದ 1964ರ ತನಕ ಕಾರ್ಪೊರೇಷನ್ ಏನು ಸರ್ಕಾರದಿಂದ ನೀರನ್ನು 1000 ಗ್ಯಾಲನ್ನಿಗೆ 8 ಆಣೆಯಂತೆ ಪಡೆದುಕೊಂಡು, ಉಚಿತವಾಗಿ ಜನಕ್ಕೆ ಕೊಡುತ್ತಾ ಇದ್ದರು, ಅದನ್ನೆಲ್ಲಾ ತಕ್ಷಣ ನಿಲ್ಲಿಸಿ, ಇವೊತ್ತು ಸಾವಿರ ಲೀಟರ್‌ಗೆ 33 ಪೈಸಾ ಮಾಡಿದರು. ಇದು ಇಂಡಿಯಾ ದೇಶದ ಯಾವ ನಗರದಲ್ಲೂ ಇಲ್ಲ. ಡೆಲ್ಲಿಯಲ್ಲಿ 11 ಪೈಸಾ ಇದೆ, ಕಲ್ಕತ್ತಾದಲ್ಲಿ 23 ಪೈಸಾ ಇರಬಹುದು, ಮದ್ರಾಸ್‌ನಲ್ಲಿ 33ಪೈಸಾ ಇದ್ದರೆ ಅಲ್ಲಿ 13 ಸಾವಿರ ಗ್ಯಾಲನ್ನಿನಷ್ಟು ನೀರನ್ನು ಉಚಿತವಾಗಿ ಕೊಡುತ್ತಾರೆ. ಇದನ್ನೆಲ್ಲಾ ನಿಲ್ಲಿಸಿದರು. ಎರಡು ಸಾವಿರ ಸಾರ್ವಜನಿಕ ನಲ್ಲಿಗಳಿಗೆ ವರ್ಷಕ್ಕೆ ಐದು ರೂಪಾಯಿ ಕೊಟ್ಟು ನೀರು ಪಡೆದುಕೊಳ್ಳಬೇಕಾಗುತ್ತದೆ; ಎಂದು ಕಾರ್ಪೊರೇಷನ್ನಿಗೆ ಆದೇಶ ನೀಡಿದರು. ಇಂತಹ ಒಂದು ಕೃತಿಯನ್ನು ಮಾಡಿ, ಇವೊತ್ತು ಬೆಂಗಳೂರು ನಗರದ ಜನತೆಗೆ ಮನಸ್ಸಿನಲ್ಲಿ ಒಂದು ಉದ್ವಿಗ್ನತೆ ಉಂಟಾಗುವಂತೆ ಸರ್ಕಾರದವರು ನಡೆದುಕೊಂಡಿದ್ದಾರೆ. ಮಾನ್ಯ ಮಂತ್ರಿಗಳು ಈ ಸಂದರ್ಭದಲ್ಲಿ ಒಂದು ಹೇಳಿಕೆಯನ್ನು ಕೊಟ್ಟು, ಬೇರೆ ಕಡೆಯಿಂದ ದುಡ್ಡು ಕೊಡಿ, ನಿಮಗೆ ಉಚಿತ ನೀರು ಕೊಡುತ್ತೇವೆಂದು ಹೇಳಿದ್ದಾರೆ. ನಿಜ, ಈ ಮಂಡಲಿ ನಡೆಯಬೇಕಾದರೆ ದುಡ್ಡು ಬೇಕು. ತಾವು ಹೇಳಿದ ಪ್ರಕಾರ 33 ಪೈಸಾ ಏನು ತೆಗೆದುಕೊಂಡಿದ್ದೀರಿ, ಅದರಿಂದ ಸುಮಾರು ನಿಮ್ಮ ಆದಾಯಕ್ಕಿಂತ ಹೆಚ್ಚಿಗೆ ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳಷ್ಟು ಹಣ ಬರುತ್ತದೆ ಎಂದು ಲೆಕ್ಕ ಗೊತ್ತಿರುವವರು ಹೇಳುತ್ತಾರೆ. ಲಾಭ ನಷ್ಟವಿಲ್ಲದೆ ಜಲ ಮಂಡಲಿ ಆಡಳಿತ ನಡೆಸುತ್ತೇವೆಂದು ತಾವು ಹೇಳಿದಿರಿ. ಹಾಗಾದರೆ ಎಷ್ಟು ಅಧಿಕಾರಿಗಳು ಆಡಳಿತ ನಿರ್ವಹಿಸುತ್ತಾರೆ, ಇಂಜಿನಿಯರ್ಸ್ ಎಷ್ಟು ಜನ ನೇಮಕವಾಗಿದೆ, ಸಿಬ್ಬಂದಿ ಎಷ್ಟು ಹೆಚ್ಚು ಮಾಡಿದ್ದೀರಿ! ನೀರಿನ ಮೇಲೆ ಕರ ಮಾತ್ರ ಹೇರುತ್ತೀರಿ. ಇನ್ನೂ ಅನೇಕ ಪ್ರಶ್ನೆಗಳು ಇವೆ. ಮೀಟರ್ ಒದಗಿಸುವ ಪ್ರಶ್ನೆ ಇದೆ, ಬಾಕ್ಸ್ ಒದಗಿಸುವ ಪ್ರಶ್ನೆ ಇದೆ. ಇದೆಲ್ಲವನ್ನೂ ತಾವು ಸಮಾಲೋಚನೆ ಮಾಡಬೇಕಾದುದು ಅಗತ್ಯ. ಇದಕ್ಕಾಗಿ ತಜ್ಞರನ್ನು ನೇಮಕ ಮಾಡಬೇಕು. ಎಷ್ಟು ಲೀಟರ್ ನೀರನ್ನು ಉಚಿತವಾಗಿ ಕೊಡಬೇಕು, ಸಾರ್ವಜನಿಕ ನಲ್ಲಿ ಬಗ್ಗೆ ಯಾವ ಧೋರಣೆ ವಹಿಸಬೇಕು ಎಂಬುದಕ್ಕೆ ಒಂದು ಸಮಿತಿ ನೇಮಕ ಮಾಡಬೇಕು ಮತ್ತು ತೀರ್ಮಾನ ತೆಗೆದುಕೊಳ್ಳಬೇಕು. ಕೇವಲ ನಾಗಣ್ಣನವರ ಅಧ್ಯಕ್ಷತೆಯಲ್ಲಿ ಉಪವಾಸ ಮಾಡುತ್ತಾರೆ ಎಂದು ಅವರ ಬೇಡಿಕೆಯನ್ನು ತಿರಸ್ಕಾರ ಮಾಡಿಬಿಡಬೇಕು ಎಂಬ ಭಾವನೆ ತಳೆಯತಕ್ಕಂಥಾದ್ದು ಸರಿಯಲ್ಲ. ಈ ದೃಷ್ಟಿಯಿಂದ ಬೆಂಗಳೂರು ನಗರ ಪೌರಸಮಿತಿಯ ಬೇಡಿಕೆಗಳನ್ನು ತಮ್ಮ ಮುಂದೆ ಇಟ್ಟಿದ್ದೇವೆ. ಆದುದರಿಂದ ಇದನ್ನು ಸಹಾನುಭೂತಿಯಿಂದ ನಿಷ್ಪಕ್ಷಪಾತ ದೃಷ್ಟಿಯಿಂದ ವಿಚಾರ ಮಾಡಬೇಕು. ಹಾಗೂ ಸಮಗ್ರವಾಗಿ ವಿಚಾರ ಮಾಡಬೇಕು. ಬೊಂಬಾಯಿ, ಕಲಕತ್ತ, ದೆಹಲಿ, ಮದ್ರಾಸ್ ಮುಂತಾದ [illegible]ಗಳಲ್ಲಿ ನೀರಿನ ವ್ಯವಸ್ಥೆಯ ಬಗ್ಗೆ

ಏನು ಮಾಡುತ್ತಿದ್ದಾರೆ ನೋಡಬೇಕು. ಅಮೇರಿಕಾ ಟೋಕಿಯೋದಲ್ಲಿಯ ವಿಚಾರ ನಾನು ಮಾತನಾಡುವುದಿಲ್ಲ. ಇವತ್ತಿನ ದಿವಸ ಸಾಮಾನ್ಯ ಮನುಷ್ಯನೊಬ್ಬನಿಗೆ ಹತ್ತು ರೂಪಾಯಿ ಹಾಲು ತರುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿ ಇರುವಾಗ್ಗೆ ಅಂಥವನ ಮೇಲೆ ಹತ್ತು ರೂಪಾಯಿ ನೀರಿನ ಬಿಲ್ಲು ಹಾಕಿದರೆ ಅವನು ಏನು ಮಾಡಬೇಕು ? ನೀರನ್ನು ಬಿಡಬೇಕೇ ಅಥವಾ ಹಾಲನ್ನು ಬಿಡಬೇಕೇ ? ಇದನ್ನು ಯೋಚನೆ ಮಾಡಬೇಕಾಗುತ್ತದೆ. ನಿಮ್ಮ ಆಡಳಿತ ವೆಚ್ಚಕ್ಕಾಗಿ ಹಣ ಬೇಕೆಂದು ಜನರನ್ನು ಈ ರೀತಿಗೆ ಸುಲಿಗೆ ಮಾಡುವುದೇ ? ಇದು ಹೊಣೆಗೇಡಿತನದ ಪರಮಾವಧಿಯಾಗುವುದು.

ಇನ್ನು ಸ್ಕೈಕಲ್ ತೆರಿಗೆ ವಿಷಯ. ಸ್ಕೈಕಲ್ ತೆರಿಗೆ ತೆಗೆದು ಹಾಕಬೇಕೆಂಬ ಬಗ್ಗೆ ಅನೇಕ ಪೌರ ಸಭೆಗಳು ತೀರ್ಮಾನ ಮಾಡಿವೆ. ಶಿವಮೊಗ್ಗ ಪೌರಸಭೆಯಲ್ಲಿ ಕೂಡ ತೀರ್ಮಾನವಾಗಿದೆ. ಸ್ಕೈಕಲ್ಲು ಸಾಮಾನ್ಯ ಮನುಷ್ಯ ಉಪಯೋಗಿಸುವ ವಾಹನವಾಗಿರುವುದರಿಂದ ಇದರ ಮೇಲೆ ಯಾವ ತೆರಿಗೆಯೂ ಇರಬಾರದು ಎಂದು ತತ್ವತಃ ಎಲ್ಲರೂ ಒಪ್ಪಿಕೊಂಡಿದ್ದಾರೆ. ಸಚಿವರು ಒಂದು ಮಾತು ಹೇಳಿದರು. ಸಣ್ಣ ಗಾಡಿಗಳ ಮೇಲೆ ಇರತಕ್ಕ ತೆರಿಗೆ ತೆಗೆದುಹಾಕುವುದು ಬೇಡವೇ ಎಂದು ಹೇಳಬಹುದು ಸ್ಕೈಕಲ್ ಇದು ಪೌರಸಮಿತಿಯ ಸಿಂಬಲ್ ಆಗಿರುವುದರಿಂದ ನಾವು ತೆರಿಗೆ ತೆಗೆಯುವುದಿಲ್ಲ ಎಂದು ಹೇಳಬಹುದು. ಈಗ ಇದಕ್ಕೆ ಸಂಬಂಧಪಟ್ಟ 122ನೇ ವಿಧಿಯನ್ನು ತಿದ್ದುಪಡಿ ಮಾಡುತ್ತೀರಿ. ನೋಟಿಸ್ ಕೊಟ್ಟು 15 ದಿವಸಗಳ ನಂತರ ತೆರಿಗೆ ಬರದೇ ಇದ್ದರೆ ಸ್ಕೈಕಲ್ ಹಿಡಿದು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಜಲ ಮಂಡಲಿಯು ದುಡ್ಡು ತೆಗೆದುಕೊಂಡು ನೀರನ್ನು ಕೊಡತಕ್ಕಂಥಾದ್ದು, ಮೇಯರ್ ಅವರು ಅಲಂಕಾರ ಪ್ರಾಯರಾಗಿ ಕೂಡತಕ್ಕದ್ದು ಕಮಿಷನರ್ ಅವರು ಸರಕಾರದಿಂದ ಬರತಕ್ಕ ಟೆಲಿಫೋನ್ ಮೂಲಕ ಆಗಲಿ, ಕ್ರೈ ಅಥವಾ ಬಾಯಿ ಆರ್ಡರ್ ಮೂಲಕ ಆಗಲಿ ಅವರು ಆರ್ಡರ್ ಮಾಡುತ್ತಾ ಹೋಗಬೇಕು. ಚುನಾಯಿತ ಸದಸ್ಯರು ಕಾರ್ಪೋರೇಟರುಗಳು ಬಂದು ಏನಾದರೂ ಒಂದು ಮಾತನಾಡಿದರೆ ಅವರು ಮನೆಗೆ ಹೋಗುವುದು. ಈ ರೀತಿ ಈ ತಿದ್ದುಪಡಿ ತರುವ ಮೂಲಕ ನನಗೆ ಭಯ ಉಂಟು ಮಾಡಿದೆ. ಇದುವರೆಗೆ ಗ್ರಾಮ ಪಂಚಾಯತಿಯಾಗಲಿ ತಾಲ್ಲೂಕ್ ಬೋರ್ಡ್ ಆಗಲಿ ಅವುಗಳನ್ನು ಕಾಲು ಕೆಳಗೆ ಹಾಕಿ ತುಳಿದುಬಿಟ್ಟಿದ್ದೀರಿ. ಅವು ಸತ್ತು ಹೋಗಿವೆ. ಅವುಗಳಿಗೆ ಜೀವ ತುಂಬುತ್ತೀರಾ ಎಂಬುದನ್ನು ಕಾದು ನೋಡಬೇಕಾಗಿದೆ. ನಮ್ಮ ಕರ್ನಾಟಕ ರಾಜಧಾನಿ ನಗರ ಬೆಂಗಳೂರು ನಗರದಲ್ಲಿ ಜನತೆ ಓಟು ಕೊಟ್ಟು ಆರಿಸಿ ಬಂದಿರತಕ್ಕ ಈ ನಗರ ಸಭೆಯಲ್ಲಿ ನಿಮ್ಮ ಹಸ್ತಕ್ಷೇಪಕ್ಕೆ ಅವಕಾಶವಿಲ್ಲ ಎಂದು ತಿಳಿದುಕೊಂಡು ಈ ರೀತಿ ಮೇಯರ್‌ರ ಅಧಿಕಾರ ಕಿತ್ತುಕೊಳ್ಳುವುದು ಅವಮಾನಕರ. ಪ್ರಜಾಪ್ರಭುತ್ವಕ್ಕೆ ಕೊಡಲೀ ಪೆಟ್ಟು ಕೊಟ್ಟ ಹಾಗೆ. ಆದುದರಿಂದ ಸರಕಾರ ಈ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಬೇಕು. ಇದನ್ನು ಕಾರ್ಪೋರೇಷನ್ ಪೌರ ಸಭೆಗಳ ವಿಚಾರಕ್ಕೆ ಬಿಟ್ಟುಕೊಡಬೇಕು. ಇಲ್ಲವೆ ಇದನ್ನು ಸಮಗ್ರವಾಗಿ ಪರಿಶೀಲನೆ ಮಾಡುವುದಕ್ಕಾಗಿ ಒಂದು ಪರಿಶೀಲಕ ಸಮಿತಿಗಾದರೂ ಒಪ್ಪಿಸಬೇಕು. ಈ ರೀತಿ ಅವಸರದಲ್ಲಿ ತಿದ್ದುಪಡಿ ಮಾಡುವುದು ಸರಿಯಲ್ಲ ಎಂದು ಎಚ್ಚರಿಕೆ ಕೊಡುತ್ತೇನೆ. ಸರಕಾರದ ರೀತಿ ನೀತಿಯಿಂದ ಹುಣ್ಣಿನ ಮೇಲೆ ಬರೆ ಎಳೆದಂತೆ ಆಗುವುದರಿಂದ ನಾನು ಈ ತಿದ್ದುಪಡಿಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

Mr. SPEAKER.—In the morning the understanding was that the Bills would be finished within three hours and one hour will be left for clarification on food statement. Now we are exceeding the time limit. If the Hon'ble Members are agreeable I will give some more time for this Bill. I am taking that step because the clarifications on food can be sought while we are doing the budget debate. Now Sri V. S. Patil may kindly finish within ten minutes.

Sri V. S. PATIL (Belgaum-1).—This Bill requires one hour to deal with all the clauses.

Mr. SPEAKER.—I cannot allow everybody to take his own time. Sri G. V. Gowda has finished within the time touching all the points and all the clauses. I am very happy about it. He has not left a single point untouched.

† Sri V. S. PATIL.—The statement of objects and reasons says that it is brought for the purpose of streamlining the administration of the Corporation. That is the main purpose of this Bill. Instead of having

(SRI V. S. PATIL)

these words "streamline" they could have used the words "Steamrolling". It would have been proper if they had used this word. In the Statement of objects and reasons, I would like to request the Hon'ble Minister in charge to use the word steamrolling at the place where the word "streamline" is there because looking at all these provisions which have been incorporated in this Bill, it is nothing but steamrolling all the powers that are really vested in the Corporation. They don't want any sort of obstruction. On page 3, Sub-clause 2 of Clause 6, it reads like this : All correspondence between the Corporation and the Government or other authority shall be conducted by the Commissioner". Amendment to Section 39 says "That all correspondence between the Government and the Corporation must pass through the Mayor". The Government wants to delete this power of the Mayor and I do not know how the Mayor is expected to run the administration.

MR. SPEAKER.—There is an amendment to this provision. It says like this. "That no letter shall be sent to Government without the previous intimation to the Mayor and on such intimation the Mayor may furnish his views, if any, on such letter to the Government."

4-00 P. M.

SRI V. S. PATIL.—But if that is the intention, then this amendment ought to have been deleted.

MR. SPEAKER.—Already there is provision that the correspondence should go through the Mayor. But the new provisio says, no letter shall be sent to the Government without previous intimation to the Mayor. Intimation is something different.

SRI V. S. PATIL.—That is what, I am saying. According to the present procedure, the Mayor is entitled to make some remarks if he likes, while forwarding correspondence from the Commissioner.

MR. SPEAKER.—That is also in the amendment.

SRI V. S. PATIL.—If the amendment is there, why should it not be deleted ?

MR. SPEAKER.—I am inviting notice to something which the Member is not aware of. There is an amendment which says :

> " on such information, the Mayor may furnish his views, if any, on such letter to the Government."

SRI V. S. PATIL.—The spirit of the wording will show that this Commissioner is to be treated not as a subordinate of the Mayor, but as an equal authority. He may simply give intimation and have correspondence with the authorities. That is not proper.

Then I should like to refer to the new Clause 47-B on page 6, which deals with power to appoint Administrator in certain cases.

This is a very obnoxious provision made in the Municipalities Act as well as in the Taluk Boards and Panchayats. I should like to comment on sub-clause (c) which reads as :

> "the term or the extended term of office of the Councillors has expired and the new Corporation has not been constituted in accordance with the provisions of this Act."

Here the meaning that we have to consider is that the elections are to be held under the auspices and orders of the Government. The Government is responsible for holding all these elections under the rules. And if the Government commits any default or mistake, and these orders are challenged in the High Court or before some judicial authority, and if they find things are not properly done under the law, and suspends the elections, why should the people be made to suffer for the faults of the Government. In the Municipality of Belgaum, this provision is in force. Government ought to have held election to that Municipality in the year 1962 but Government did not hold it. Subsequently, they passed some illegal order and the High Court came in the way of the elections and they had to be postponed. Till now Government have not been able to conduct those elections, and they have got power to appoint Administrator. So, the people of Belgaum as well as of Nipani and several other places, even though they have not committed any mistake or default, have been deprived of their rights to Govern their municipal body due to the faulty orders of the Government. Something will happen In Bangalore as in other Corporations if they do not go according to the wishes of the ruling party. They will take measures under this clause and supersede it, or they will try to see that the elections are not held in time and Administrator is appointed. This provision is derogatory to the democratic principles. I think, at least, in the case of Corporations, such power should not be given to the Government by approving such clauses.

Then, please see sub-clause (3) of the same section ; it reads :

> "The Government may, if it thinks fit, appoint an Advisory Council to advise and assist the Administrator......"

If you want to appoint an Administrator, where is the necessity to appoint an Advisory Council. That means, persons who are elected by the people are to be thrown out and hirelings nominated in their places. Still, our Congress friends say that they are democrats. I do not know how they are advocating democracy at all.

Even the amendment to Section 72 will clearly show that they are undemocratic. It is said that "the Government" shall be inserted for "the Corporation". Now, the sanction of the Corporation shall be required (i) for the acceptance or acquisition of any immovable property ....." Now the Government wants to insert itself. If this amendment is approved, the sanction of the Government will be necessary for acceptance or acquisition of immovable property. I do not know whether

(SRI V. S. PATIL)

our friend, the Minister in charge of Municipal Administration, has understood the working of this Government, especially the department of the Local Self-Government. There files are not traceable at all. Even though several complaints are made by the Local authorities to trace them and sanction certain amounts, the papers are not traceable at all. If these impediments continue for acquiring property, it will be very difficult for streamlining the administration as stated in the Statement of Objectes and Reasons. Instead, it will be hampering the administration for acquiring properties of the Corporation.

Then refer to page 8. There is an insertion of a new Section, *i.e.*, 74-A. It is a provision relating to land and other properties, of the Corporation. We do not complain about this sub-clause (1). But in sub-clause (2), it is said :

> " It shall be competent to the Government......to take over any land or other property vested or vesting in the corporation......"

This is too arbitrary. This is derogatory to any sense of decency on the part of either the Government or a private individual. The corporation have acquired property worth crores of rupees at their own cost ; The money comes from the citizens, buildings or hotel keepers, or land-owners or house-hold owners. Here this right of acquisition and requisition is not restricted. Government can take over any land or other property owned by the Corporation. That is too much. I do not understand why Government is thinking about this, when the properties are acquired at the cost of the Corporation or by the funds of the Corporation, collected from the people. Government can ask the people tomake over any property to the Government without any compensation ; they cannot even question. This is really absurd. And I may say that this provision is nothing but designed to cripple the whole administration of the Corporation. The ownership vests in the Corporation. How without payment of compensation the Government can take it ? I submit that this provision will definitely be against the constitution to acquire the property which belongs to others. The Corporation is not a sub-body of the Government. It is an independent and statutory body and the property of the Corporation cannot be acquired without payment of compensation. It is against the constitution. I would like the Hon'ble Minister to consult his Department and see whether this clause will not be struck-down by the judiciary.

Then Sir, a new clause is proposed to section 79 to the following effect :

> " no contract involving an expenditure exceeding two lakhs of rupees shall be made by the Commissioner unless it has been sanctioned by the Government ".

Why Government sanction is required in the day-to-day working of the Corporation, I do not understand. What is the object of curtailing the powers of the Corporation and even of the Commissioner by imposing the authority of the Government for sanctioning contracts also. This is really absurd and it is rendering this big body like the Corporation to nothingness.

Then on page 9, I refer to amendment of section 36. It says :

> (b) for the words " the corporation shall within two months appoint some person", the words, the Corporation shall, subject to confirmation by the Government, within two months from the date of occurrence of the vacancy or the creation of the office, as the case may be, appoint a duly qualified person " shall be substituted."

This means that the Government want to deprive the body like the Corporation of their legitimate powers which they have exercised all these years. The only unfortunate thing that has happened is that the Municipal Corporation here did not act according to the wishes of the Ruling Party and it appears in order to take revenge as suggested by my friend Sri Gopala Gowda, the present Bill has been brought forward.

Then Sir, on page 10, there is a very important clause that is being inserted. Section 99 defines what is the percentage of tax. Here the wording as it stands is : ' not being less than 10 per cent and not more than 20 per cent'. Now it is sought to be amended as ' not being less than 15 per cent and not more than 25 per cent'. This is what is sought to be inserted. This means that the tax is to be increased and it can be increased from 15 to 25 per cent; and at the same time, it appears that the Government have neglected—there is another tax the property tax at 4 per cent that is taken over by virtue of another Act from the purview of this body—the Urban Land Tax, and in order to make good that loss, the Government wants to increase this. Ultimately the whole burden will be on the people. The burden of taxation has to be borne by the people without any corresponding right accruing.

Sri R. M. PATIL.—What is the rate of tax in your City ?

Sri V. S. PATIL.— In my city, I have not ascertained. If that matter comes up there, then we will look into it. I have not ascertained.

Mr. SPEAKER.—The suggestion is, it is much more in Belgaum than in Bangalore.

Sri V. S. PATIL.—I can understand it. The Hubli people wanted to have a Corporation. That is why they may have consented for the increase. But I do not know, why don't you take a lower percentage in other cities ? Why do you take only the higher tax ? If you find that taxation is higher in Bombay, then you take shelter under that. If you find that the tax is higher in Madras, then you take shelter under that.

(SRI V. S. PATIL)

Similarly, if the municipal tax is high in one place, you will take shelter under that and try to increase. Your object must be to reduce taxation. That is my submission.

There is one more thing which I do not understand in the existing Act as well as in the present Bill. That is on page 11 :

> " (*k*) land which is registered as land used for agricultural purposes in the revenue accounts of the Government and is actually used for the cultivation of crops; "

This land has to be exempted from taxation under section 101. If the land is within the limits of corporation, why should it be made free from tax because it is used for agricultural purpose ? If it is an ordinary cultivation, I do not mind. But in this city it is becoming a troublesome spot. Several people are using the sullage water to maintain garden lands. I do not know how far the sullage water is healthy for growing vegetables in these fields, because that will require scientific research in the matter. The worse thing is, in order to favour these garden people, the municipal Corporation as well as the Government has not covered the drains and has allowed the drainage openly and it has become a tremendous nuisance.

MR. SPEAKER.—It does not come under the Bill.

SRI V.S. PATIL.—That is why I should like to suggest that this clause must be deleted and they must be taxed. Instead of giving them concessions under this legislation, they must be heavily taxed and the Corporation should take its legitimate income out of that.

I will now refer only to one clause regarding 149 (a).

MR. SPEAKER.—There is no time. I thought the Members would co-ordinate within themselves. There is still one more Bill.

SRI V. S. PATIL.—If there is no time, I will finish, Sir.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, 1966ನೇ ಬೆಂಗಳೂರು ಸಿಟಿ ಮುನಿಸಿಪಲ್ ಕಾರ್ಪೊರೇಷನ್ ತಿದ್ದುಪಡಿ ಮಸೂದೆಯನ್ನು ನಾನು ವಿರೋಧ ಮಾಡುತ್ತೇನೆ. ಆ ರೀತಿ ವಿರೋಧ ಮಾಡುವುದಕ್ಕೆ ಇಷ್ಟೇ ಕಾರಣ. ಹಿಂದೆ ಈ ಖಾತೆಯನ್ನು ಹೊಂದಿದ್ದ ಮಂತ್ರಿಗಳು ಬೆಂಗಳೂರು ಕಾರ್ಪೊರೇಷನ್ ಬಗ್ಗೆ ಒಂದು ಕಾಂಪ್ರಹೆನ್‌ಸಿವ್ ಮಸೂದೆಯನ್ನು ತೆಗೆದುಕೊಂಡು ಬರುತ್ತೇವೆ. ಮತ್ತು ಬೆಂಗಳೂರು ಕಾರ್ಪೊರೇಷನ್ನಿನ ಆಕ್ಟ್‌ನಲ್ಲಿರತಕ್ಕ ಎಲ್ಲಾ ಅಸಮಂಜಸವಾದುವನ್ನು ತೆಗೆದುಹಾಕಿ ಒಂದು ಕಾನೂನು ಮಾಡುತ್ತೇವೆಂದು ಹೇಳಿ ಈಗ ಅದಕ್ಕೆ ಒಂದು ತಿದ್ದುಪಡಿಯನ್ನು ಈ ಸಭೆಯಲ್ಲಿ ತಂದಿರುವುದನ್ನು ನೋಡಿದರೆ........ ...

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಪಾಯಿಂಟ್ ಆಫ್ ಆರ್ಡರ್. ಒಬ್ಬ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಆಫೀಸರ್ಸ್ ಗ್ಯಾಲರಿಯಲ್ಲಿ ಬೇರೆ ಡ್ರೆಸ್ಸಿನಲ್ಲಿ ಈ ಸಭೆ ನಡೆಯುವಾಗ ಬಂದು ಕೂತುಕೊಳ್ಳಬಹುದೇ ?

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಮಾನ್ಯ ಸದಸ್ಯರು ಅಧ್ಯಕ್ಷರ ಗಮನಕ್ಕೆ ಆ ವಿಚಾರವನ್ನು ತರಬೇಕೆಂದು ಹೇಳುತ್ತಿದ್ದಾರೆ.

MR. SPEAKER.—I made enquiries. It was represented to me that there is a Sub-Inspector of Police sitting in the Press Gallery. I made

enquiries and ascertained that he is an officer on duty, requisitioned, as usual, during the period of sessions. He is not here without my permission. Sri Muckannappa will continue.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಅವರು ಇಲ್ಲಿಗೆ ಬಂದು ಏನು ಕೆಲಸ ಮಾಡುತ್ತಾರೆ ಎಂಬುದನ್ನು ನಾವು ಸ್ವಲ್ಪ ತಿಳಿದುಕೊಳ್ಳಬೇಕಾಗಿದೆ.

Mr. SPEAKER.—If the Member does not want to participate in the Debate; I will call upon......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ನಮ್ಮ ಮೇಲೆ ಸ್ಪೆಷಲ್ ರಿಪೋರ್ಟ್ ಮಾಡುತ್ತಾರೆ.

Mr. SPEAKER.—The Chair will deal with it, when the point is raised properly. Please continue the Debate.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮ್ಮ ವಿಷಯದಲ್ಲಿ ಏನಾದರೂ ಬಂದರೆ ಇದು ನಿಮಗೆ ಸಂಬಂಧ ವಿಲ್ಲ ಎಂದು ಹೇಳುತ್ತೀರಿ, ಅದಕ್ಕೋಸ್ಕರ ನಾನು ತಮ್ಮನ್ನು ಕೇಳಿದೆ.

Mr. SPEAKER.—If the member has nothing more to say than this, I will call upon the Minister to reply.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮಗೆ ಇಲ್ಲಿ ಏನೇನು ಪ್ರಿವಿಲೇಜೂ ಇಲ್ಲ ಎಂದು ಕಾಣುತ್ತದೆ.

Mr. SPEAKER.—It is not relevant.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾವು ಈ ಸಭೆಯಲ್ಲಿ ಕೆಲಸ ಮಾಡುವಾಗ ಸರ್ಕಾರಕ್ಕೆ ಏನೇನೋ ಹೇಳಬೇಕಾಗುತ್ತದೆ. ನಮ್ಮ ಸುತ್ತಮುತ್ತಲೂ ಪೋಲೀಸು ಕಾವಲು ಇದ್ದರೆ ಅವರು ಯಾವಾಗ ಯಾರಮೇಲೆ ಏನು ಬರೆಯುತ್ತಾರೆಯೋ ?

Mr. SPEAKER.—That does not mean, that he can go on like this. I must give him permission to raise other points. Simply because the point is mooted, members cannot go on asking all sorts of things. This is not the time. What are the rules here for ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮಗೆ ಸಂಬಂಧಪಟ್ಟ ಹಾಗೆ ಇಲ್ಲಿ ಏನಾದರೂ ವಿಷಯಗಳು ಬಂದರೆ ಅದನ್ನು ಹೇಳುವುದಕ್ಕೆ ತಾವು ನಮಗೆ ಅವಕಾಶವನ್ನು ಕೊಡುವುದಿಲ್ಲ.

Mr. SPEAKER.—I am sorry that the Member is making such remarks.

Sri C. J. MUCKANNAPPA.—We will talk on proper occasion, where we will just ventilate our grievances. We will do it.

Mr. SPEAKER.—But he should not disturb the even tenor of the business on the Floor of the House.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ —ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ನಾವು ಈ ಸಭೆಯಲ್ಲಿ ಮಾತನಾಡುವಾಗ ನಮಗೆ ರಕ್ಷಣೆ ಕೊಡಬೇಕು. ನಮ್ಮ ಹಕ್ಕುಬಾಧ್ಯತೆಗಳಿಗೆ ಚ್ಯುತಿ ಬಾರದಂತೆ ನೋಡಿಕೊಳ್ಳಬೇಕು. ನಮಗೆ ಅಂತಹ ಪ್ರಿವಿಲೇಜನ್ನು ಅಧ್ಯಕ್ಷರಾದ ತಾವು ಕೊಡಬೇಕು.

Mr. SPEAKER.—Is the Member debating on the clause of the Bill ?

Sri C. J. MUCKANNAPPA.—Yes, Sir. I have got my own apprehensions...

Mr. SPEAKER.—Which clause ?

Sri C. J. MUCKANNAPPA.—On general discussion. Because if a Police Officer watches us, I do not know whom he is going to watch, what he is going to report and on whom......

Mr. SPEAKER.—I rule this as irrelevant.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಯಾವ ಹೊತ್ತಿನಲ್ಲಿ ಯಾರಮೇಲೆ ಏನು ಬರೆಯುತ್ತಾರೋ ಎನ್ನುವ ಅನುಮಾನ ನಮಗೆ ಉಂಟಾಗಿದೆ.

Interruption

Mr. SPEAKER.—I have given the Hon'ble Member ten minutes. If he unnecessarily goes beyond......

Sri C. J. MUCKANNAPPA.—What have I done, Sir?

Mr. SPEAKER.—What the Member has done is that he is not resuming the Debate.

Sri C. J. MUCKANNAPPA.—That you are cutting at the root of democracy— am I not entitled to say.

Sri S. NIJALINGAPPA (Chief Minister).—The Speaker is not cutting at the roots of democracy.

† **Sri C. J. MUCKANNAPPA.**—It is the Government. I am saying this, to the Government through the Speaker.

ಸ್ವಾಮಿ, ಈ ಬೆಂಗಳೂರು ನಗರದ ನಗರ ಸಭೆಗೆ ಸಂಬಂಧಿಸಿದ ತಿದ್ದುಪಡಿ ವಿಧೇಯಕ ಏನಿದೆ ಇದು ಈಗ್ಗೆ 18 ವರ್ಷಗಳ ಹಿಂದೆ ಮಹಾತ್ಮ ಗಾಂಧೀಜಿಯವರು ಇಂಡಿಯಾ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪನೆ ಮಾಡಬೇಕೆಂದು ಏನು ಘೋಷಣೆ ಮಾಡಿದರು ಆ ಘೋಷಣೆಗೆ ಇದು ಕುಠಾರ ಪ್ರಾಯವಾಗಿದೆ. ಅಧಿಕಾರ ವಿಕೇಂದ್ರೀಕರಣ ಮಾಡಿ ಪ್ರಜೆಗಳಿಗೆ ಅಧಿಕಾರವನ್ನು ಕೊಡುತ್ತೇವೆ ಎಂದು ಹೇಳಿ, ತಾಲ್ಲೂಕು ಬೋರ್ಡು, ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತನ್ನು ರಚನೆ ಮಾಡುತ್ತೇವೆಂದು ಒಂದು ಕಾನೂನನ್ನು ಈ ಸಭೆಯಲ್ಲಿ ಪಾಸು ಮಾಡಿ ಜಗತ್ತಿನಲ್ಲೆಲ್ಲಾ ಸಾರಿದರು. ಈಗ ಅದಕ್ಕೆಲ್ಲಾ ತಿಲಾಂಜಲಿಯನ್ನು ಕೊಟ್ಟಿದ್ದಾರೆ. ಬೆಂಗಳೂರು ಕಾರ್ಪೋರೇಷನ್ ಬಿಲ್ಲಿಗೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದರಲ್ಲಿ ಬೆಂಗಳೂರು ನಗರದ 16 ಲಕ್ಷ ಜನಗಳ ಪ್ರತಿನಿಧಿಯಾಗಿ ಚುನಾವಣೆಯಾಗತಕ್ಕ ಮೇಯರು ಒಬ್ಬರು ಐ. ಎ. ಎಸ್. ಆಫೀಸರ ಕೈಕೆಳಗೆ ಆಡಳಿತವನ್ನು ಮಾಡಿ ಎಂದು ಹೇಳಿದ್ದಾರೆ. ಅವರು ಹೇಳಿದ ಹಾಗೆ ಕೇಳಬೇಕು. ಅವರಿಗೆ ಅಧಿಕಾರವನ್ನ ಕೊಟ್ಟಿರತಕ್ಕದ್ದನ್ನು ನೋಡಿದರೆ ಈ ಕಾರ್ಪೋರೇಷನ್ ಬೇಡ ಎಂದು ಅನಿಸುತ್ತದೆ. ಮೈಸೂರು ಸಂಸ್ಥಾನದಲ್ಲಿ ಡೆಮಾಕ್ರಟಿಕ್ ಪ್ರಿನ್ಸಿಪಲ್‌ನಿಂದ ಕೆಲಸ ಮಾಡತಕ್ಕ ಯಾವುದೇ ಸಂಸ್ಥೆಯು ಇರುವುದು ಬೇಡ ಎಂದು ಡಿಕ್ಲೇರ್ ಮಾಡಿ ಬಿಡಿ. ಆಗ ತಮಗೂ ಚೈನಾ ದೇಶಕ್ಕೂ ಯಾವುದೂ ವ್ಯತ್ಯಾಸ ಕಾಣುವುದಿಲ್ಲ. ಈ ಒಂದು ತಿದ್ದುಪಡಿ ಮಸೂದೆಯನ್ನು ತೆಗೆದುಕೊಂಡು ಬಂದು ಕಾರ್ಪೋರೇಷನ್ನಿನ ಅಧಿಕಾರವನ್ನು ಮೊಟಕು ಮಾಡುತ್ತಿದ್ದಾರೆ. 1965ನೇ ಇಸವಿಯಲ್ಲಿ ಬೆಂಗಳೂರು ಕಾರ್ಪೋರೇಷನ್ನಿನ ಅಧಿಕಾರ ಕಾಂಗ್ರೆಸ್ಸಿನವರ ಕೈತಪ್ಪಿ ಹೋಗಿತ್ತು. ದುರದೃಷ್ಟವಶಾತ್ ಮೊನ್ನೆ ಮೇಯರ್ ಅವರ ಚುನಾವಣೆಯು ನಡೆದು ಮತ್ತೆ ಕಾಂಗ್ರೆಸ್ಸಿನವರಿಗೆ ಅಧಿಕಾರ ಬಂದಮೇಲೆ ಈ ತಿದ್ದುಪಡಿ ಮಸೂದೆಯನ್ನು ತೆಗೆದುಕೊಂಡು ಬಂದಿದ್ದಾರೆ. 10 ಸಾವಿರ ರೂಪಾಯಿಗಳಿಂದ 25 ಸಾವಿರ ರೂಪಾಯಿಗಳವರೆಗೆ ಯಾವ ಕೆಲಸಕ್ಕೆ ಬೇಕಾದರೂ ಕಮೀಷನರು ಮಂಜೂರು ಮಾಡಬಹುದು ಎಂದು ಹೇಳಿದ್ದಾರೆ. ಒಂದು ಸಾವಿರ ರೂಪಾಯಿಗಳಿಂದ 5 ಸಾವಿರ ರೂಪಾಯಿಗಳವರೆಗೆ ಇರುವ ಕೆಲಸಕ್ಕೆ ಟೆಂಡರ್ ಕರೆಯಬೇಕೆಂದು ತೀರ್ಮಾನ ಮಾಡಿದ್ದಾರೆ. It is not the Mayor who is the Bangalore City Corporation. But it is the Commissioner. ಪ್ರತಿಯೊಂದು ಹೆಜ್ಜೆ ಹೆಜ್ಜೆಗೂ ಕಾರ್ಪೋರೇಷನ್ನಿನ ಅಧಿಕಾರವನ್ನು ಕುಂಠಿತ ಮಾಡಿದ್ದಾರೆ. ಕಾರ್ಪೋರೇಷನ್ನಿನಿಂದ ಸರ್ಕಾರಕ್ಕೆ ಯಾವುದಾದರೂ ವಿಷಯ ಬೇಕು ಎಂದು ಕೇಳಿದಾಗ ಆ ವಿಷಯವನ್ನು ಕಮೀಷನರು ಮೇಯರ್ ಅವರ ಅವಗಾಹನೆಗೆ ತರದೆ ಸರ್ಕಾರದೊಡನೆ ಪತ್ರ ವ್ಯವಹಾರವನ್ನು ನಡೆಸಬಹುದು ಎಂದು ಇದೆ. ಈ ರೀತಿ ಮಾಡಿದರೆ ಪ್ರಜಾಪ್ರಭುತ್ವ ಉಳಿಯುತ್ತದೆಯೇ? ಶ್ರೀಮಾನ್ ಕೊಂಡಜ್ಜಿಬಸಪ್ಪನವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿ ಅವರು ತಮ್ಮ ವರದಿಯನ್ನು ಕೊಟ್ಟಮೇಲೆ ಜಿಲ್ಲಾ ಪರಿಷತ್ತನ್ನು ರಚನೆ ಮಾಡುತ್ತೇವೆ, ಪಂಚಾಯಿತಿಗಳನ್ನು ರಚನೆ ಮಾಡುತ್ತೇವೆ, ತಾಲ್ಲೂಕು ಬೋರ್ಡನ್ನು ರಚನೆ ಮಾಡುತ್ತೇವೆ, ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಪ್ರಜೆಗಳಿಗೆ ಅಧಿಕಾರವನ್ನು ಕೊಡುತ್ತೇವೆ ಎಂದು ಹೇಳಿ ಈಗ ಕಾರ್ಪೋರೇಷನ್ನಿಗೆ ಸ್ಥಳೀಯ ಸಂಸ್ಥೆಗೆ ಇರತಕ್ಕ ಅಧಿಕಾರವನ್ನು ಕುಂಠಿತ ಮಾಡುವುದಕ್ಕೆ ಹೊರಟಿದ್ದಾರೆ. ಈಗ ತಂದಿರತಕ್ಕ ತಿದ್ದುಪಡಿ ಏನಿದೆ ಇದು ಅಷ್ಟು ಶೋಭಾಯಮಾನವಾಗಿ ಕಾಣುವುದಿಲ್ಲ. ಇದು ಪ್ರಜಾಪ್ರಭುತ್ವವನ್ನು ಬೆಳೆಸುವುದಕ್ಕೆ ಸಹಾಯವಾಗುತ್ತದೆಯೇ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಇದರಲ್ಲಿ ಎಲ್ಲಿ ಅಧಿಕಾರವೆಲ್ಲ ಕೇಂದ್ರೀಕೃತವಾಗಿದೆಯೋ ಅಲ್ಲಿ ಕಾರ್ಪೋರೇಷನ್ ಫಂಕ್ಷನ್ ಮಾಡುವುದಕ್ಕೆ ಕಾನೂನನ್ನು ಅಳವಡಿಸಿದ್ದಾರೆ. ಇಷ್ಟು ಮಾತ್ರ ಈ ತಿದ್ದುಪಡಿಯಲ್ಲಿ ಇದೆ. ಇದರಲ್ಲಿ ಕಾರ್ಪೋರೇಷನ್‌ನವರಿಗೆ ಇರುವ ಅಧಿಕಾರ, ಮೇಯರ್ ಅವರಿಗೆ ಇರುವ ಅಧಿಕಾರ ಇವುಗಳನ್ನೆಲ್ಲಾ ಕುಂಠಿತ ಮಾಡುವುದಕ್ಕೋಸ್ಕರ ಇದನ್ನೆಲ್ಲಾ ಮಾಡುತ್ತಿದ್ದಾರೆ ಎಂದು ಕಾಣುತ್ತದೆ. ಇವರು ಎಷ್ಟು ದೂರ

ಹೋಗಿದ್ದಾರೆ ಎಂಬುದನ್ನು ಯೋಚನೆ ಮಾಡುವುದಾದರೆ, ಕಾಂಗ್ರೆಸ್ಸಿಗೆ ವಿರೋಧ ಪಕ್ಷದ ಒಬ್ಬರು ಬೆಂಗಳೂರು ಕಾರ್ಪೊರೇಷನ್ನಿಗೆ ಮೇಯರ್ ಸ್ಥಾನಕ್ಕೆ ಚುನಾಯಿತರಾದಾಗ, ಈ ಬೆಂಗಳೂರು ಕಲ್ಯಾಣ ನಗರಕ್ಕೆ ಇಂಡಿಯಾ ದೇಶದ ಪ್ರಧಾನ ಮಂತ್ರಿಗಳು ಬಂದಿದ್ದಾಗ ಮೇಯರ್‌ರವರು ಯಾವ ರ್‍ಯಾಂಕಿನಲ್ಲಿ ಕುಳಿತುಕೊಳ್ಳಬೇಕು ಎಂಬುದಕ್ಕೆ ಅವರಿಗೆ ಸ್ಥಳವನ್ನು ನಿಗದಿ ಮಾಡಿರಲಿಲ್ಲ. ಪ್ರಜಾಪ್ರಭುತ್ವ ತಮ್ಮ ಕೈಯಲ್ಲಿ ಎಷ್ಟರಮಟ್ಟಿಗೆ ಬೆಳೆದು ಬರುತ್ತಿದೆ ಎಂಬುದಕ್ಕೆ ಒಂದು ನಿದರ್ಶನ ವನ್ನು ಹೇಳುತ್ತಿದ್ದೇನೆ. ಅಧಿಕಾರ ವಿಕೇಂದ್ರೀಕರಣ ಆಗಬೇಕು, ಅಧಿಕಾರ ಬರೀ ಪಟ್ಟಣದಲ್ಲಿ ಇರಕೂಡದು, ಅದು ಹಳ್ಳಿಗಳಿಗೆ ಹೋಗಬೇಕು ಎಂದು ಹೇಳಿದಂತಹ ಕಾನೂನಿನಲ್ಲಿ ಇವೊತ್ತು ಈ ಒಂದು ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದಾರೆ. ಈಗ ಮೊನ್ನೆ ತಾನೆ ಪಂಜಾಬಿನ ಆಡಳಿತ ಸುಧಾರಣೆಗಾಗಿ ಒಂದು ಕಮಿಟಿಯನ್ನು ನೇಮಕ ಮಾಡಿದ್ದರು. ಆ ಕಮಿಟಿಗೆ ನಮ್ಮ ಮೈಸೂರಿನ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷರಾಗಿದ್ದರು. ಅವರು ತಮ್ಮ ಸುಧಾರಣಾ ವರದಿಯಲ್ಲಿ ಅಧಿಕಾರ ವಿಕೇಂದ್ರೀಕರಣವಾಗಬೇಕು ಎಂದು ಹೇಳಿದ್ದಾರೆ. ಆದರೆ ಈಗ ಇಲ್ಲಿ ತಂದಿರತಕ್ಕ ತಿದ್ದುಪಡಿ ಮಸೂದೆ ಏನಿದೆ ಇದು ಪ್ರಜಾಪ್ರಭುತ್ವದ ಉಳಿವಿಗೆ ಕುಠಾರಪ್ರಾಯವಾಗಿದೆ, ಈ ಸರ್ಕಾರ ಅದಕ್ಕೆ ಕತ್ತರಿಯನ್ನು ಹಾಕುವುದಕ್ಕೆ ಪ್ರಯತ್ನಮಾಡು ತ್ತಿದ್ದಾರೆ ಎಂದು ನಾನಾದರೂ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

4-30 P.M.

ಈಗ ಇದರಲ್ಲಿ ತಾವು ಸೆಕ್ಷನ್ನು 19ಕ್ಕೆ, 39ಕ್ಕೆ, 44ಕ್ಕೆ ಎಂದು ಇಲ್ಲಿ ತಿದ್ದುಪಡಿಗಳನ್ನು ತರುತ್ತಿದ್ದೀರಿ. ಇದರಲ್ಲಿರುವ ಕ್ಲಾಜುಗಳನ್ನೆಲ್ಲಾ ಓದಿ ನೋಡಿದರೆ ಕಾರ್ಪೊರೇಷನ್ನಿಗೆ ಇರುವ ಅಧಿಕಾರಗಳನ್ನೆಲ್ಲಾ ಕುಂಠಿತ ಮಾಡಿಬಿಟ್ಟಿದ್ದಾರೆ. ಕಾರ್ಪೊರೇಷನ್ನು ಸ್ಟ್ಯಾಂಡಿಂಗ್ ಕಮಿಟಿಯವರು ಒಂದು ರೆಸಲ್ಯೂ ಷನ್ನನ್ನು ಮಾಡಿ ಆ ರೆಸಲ್ಯೂಷನ್ನಿನಂತೆ ಕೆಲಸಗಳನ್ನು ಮಾಡಬೇಕೆಂದು ಹಿಂದೆ ಇದ್ದ ಹಳೇ ಆಕ್ಟ್ ನಲ್ಲಿತ್ತು. ಈಗ ಏನೂ ಇಲ್ಲ. ಸ್ಟ್ಯಾಂಡಿಂಗ್ ಕಮಿಟಿಗೆ ಯಾವ ಅಧಿಕಾರವೂ ಇಲ್ಲ. ಎಲ್ಲ ಅಧಿಕಾರ ಗಳೂ ಕಾರ್ಪೊರೇಷನ್ ಕಮಿಷನರ್‌ರವರಿಗೇ ಇರಬೇಕೆಂದು ಮಾಡಿದೆ. ಅಲ್ಲದೆ ಈಗಿರತಕ್ಕ ಕಾರ್ಪೊರೇಷನ್ನು ಆಕ್ಟಿನಲ್ಲಿ ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡಬೇಕೆಂದು ಇರಲಿಲ್ಲ. ಈ ರೀತಿಯಾಗಿ ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡಬೇಕೆಂದು ಯಾವಾಗ ಇವರಿಗೆ ಹೊಳೆಯಿತು ಎಂದರೆ, ಕಾಂಗ್ರೆಸ್ ಪಕ್ಷದವರಲ್ಲದ ಕಾಂಗ್ರೆಸ್ಸೇತರ ಪಕ್ಷದವರು ಮೇಯರಾಗಿ ಈ ಸಲ ಬಂದುದ ರಿಂದ ಅವರಲ್ಲಿ ಹೊಸೆದಾಡಬೇಕಾಗುತ್ತದೆ ಎಂದು ಇದರಲ್ಲಿದ್ದ ಅಧಿಕಾರವನ್ನು ಮೊಟಕು ಮಾಡಬೇ ಕೆಂದು ಈಗ ಅಮೆಂಡಮೆಂಟು ತಂದು ಬೆಂಗಳೂರು ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡ ಬಹುದು, ಈಗ ಇದು ಸಾಧ್ಯವಾಗಲಿಲ್ಲ ಎಂದು ಆ ರೀತಿಯಾದ ಅಮೆಂಡುಮೆಂಟು ಇಲ್ಲಿ ತಂದಿದ್ದಾರೆ. ಬೆಂಗಳೂರು ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡಬಾರದು ಎಂದು ಇದ್ದುದನ್ನು ಈಗ ಮಾಡ ಬೇಕು ಎಂದು ತಮಗೆ ಈ ದುರ್ಬುದ್ಧಿ ಏತಕ್ಕಾಗಿ ದೇವರು ಕೊಟ್ಟನೋ ಎಂದು ತಾವು ಯೋಚನೆ ಮಾಡಲಿಲ್ಲ. ಸ್ವಾಮೀ, ಪಂಚಾಯತಿ, ತಾಲ್ಲೂಕು ಬೋರ್ಡು ಒಂದು ಸೊಸೈಟಿಯ ಇನ್ಸ್‌ಪೆಕ್ಟರುಗಳು ಇನ್‌ಸ್ಪೆಕ್ಷನ್ನಿಗೆ ಹೋಗುವ ಹಾಗೆ ಕಾರ್ಪೊರೇಷನ್ನಿಗೆ ಹೋಗಿ ತನಿಖೆ ಮಾಡಬೇಕೆಂದು ಎಲ್ಲ ಆಫೀಸರುಗಳನ್ನೂ ಇದರೊಳಗೆ ಬರುವಂತೆ ತುಂಬಿದ್ದೀರಿ. ಅಲ್ಲದೆ ಈ ದೇಶಕ್ಕೆ ಯಾವಾಗಲಾದರೂ ರಾಷ್ಟ್ರದ ಅಧ್ಯಕ್ಷರು ಬಂದಾಗ ಅಲ್ಲಿ ಮೈಸೂರು ದೇಶದ ರಾಜ್ಯಪಾಲರು, ಆಮೇಲೆ ಮುಖ್ಯ ಮಂತ್ರಿ ಗಳು ಆಮೇಲೆ ಕಾರ್ಪೊರೇಷನ್ನಿನ ವರ್‌ಷಿಪ್‌ಫುಲ್ ಮೇಯರ್ ಎಂದು ಮೊದಲಿಗೆ ಇತ್ತು. ಈಗ ಅವರನ್ನು 11 ಅಥವಾ 12ನೇ ರ್‍ಯಾಂಕಿನಲ್ಲಿರಬೇಕೆಂದು ಇಲ್ಲಿ ಒಂದು ಅಮೆಡ್‌ಮೆಂಟು ತಂದರೆ ಇದು ಎಷ್ಟರಮಟ್ಟಿಗೆ ಇರುತ್ತದೆ ಎನ್ನುವುದನ್ನು ತಾವೇ ಆಲೋಚನೆ ಮಾಡಬೇಕು.

ಅಧ್ಯಕ್ಷರು.—ಇದರೊಳಗೆ ಪ್ರೋಟೋಕಾಲ್ ಕೂಡ ಬರುತ್ತದೋ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದನ್ನು ಏಕೆ ಇಲ್ಲಿ ಹೇಳುತ್ತೇನೆ ಎಂದರೆ, ಇಲ್ಲಿ ಪ್ರಜಾಪ್ರಭುತ್ವಕ್ಕೆ ಯಾವ ರೀತಿಯಾಗಿ ಗೌರವ ಕೊಡುತ್ತಿದ್ದೀರಿ ಎನ್ನುವುದನ್ನು ಹೇಳುತ್ತಿದ್ದೇನೆ. ಇಂತಹ ಅಮೆಂಡು ಮೆಂಟುಗಳನ್ನು ಇಲ್ಲಿ ತರುವುದು ಬೇಡ ಎಂದು. ಇಲ್ಲಿ ಪ್ರೋಟೋಕಾಲ್ ವಿಷಯ ಇಲ್ಲ. ಆದರೂ ಇದರ ಬಗ್ಗೆ ತಮ್ಮ ಮುಖಾಂತರ ಈ ಸಭೆಯಲ್ಲಿ ಸರಕಾರದ ಗಮನಕ್ಕೆ ತರಬೇಕಾಗಿದೆ. ಏತಕ್ಕಾಗಿ ಇಂತಹ ತಿದ್ದುಪಡಿಗಳನ್ನು ತರುವುದಕ್ಕೆ ಹೊಗುತ್ತೀರಿ, ಇದಕ್ಕೆ ಬದಲಾಗಿ ಈ ಸಭೆಯ ಅಧಿವೇಶನ ಮುಗಿಯುವುದರೊಳಗಾಗಿ ಒಂದು ಸಣ್ಣ ಸೆಲೆಕ್ಟ್ ಕಮಿಟಿ ಮಾಡಿ ಈ ಮಸೂದೆಯನ್ನು ಇನ್ನೂ ಕೂಲಂಕಷವಾಗಿ ಅಲ್ಲಿ ಚರ್ಚೆ ಮಾಡಿ ಒಂದು ಬಿಲ್ಲನ್ನು ಸರಿಯಾಗಿ ಮಾಡಿ ತರುವುದು ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ಈ ಕಮಿಟಿಯಲ್ಲಿ ತಾವು ಕುಳಿತು ಚೆನ್ನಾಗಿ ಚರ್ಚೆ ಮಾಡಿ ಇದರಲ್ಲಿರತಕ್ಕ ಲೋಪದೋಷಗಳನ್ನು ಎತ್ತಿ ತೋರಿಸಲು ಒಂದು ಅವಕಾಶ ಮಾಡಿ ಕೊಡಬೇಕು. ಹಾಗಿಲ್ಲದೆ ನಾವು ಹೇಗಾದರೂ ಮಾಡಿ ಈ ಬಿಲ್ಲನ್ನು ಪಾಸು ಮಾಡಿಸಿಕೊಳ್ಳಬೇಕೆಂದು ಹೇಳಿದರೆ ಅದು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನಿಮ್ಮ ಇಷ್ಟ. ಅದಕ್ಕೆ ನಾನೇನು ಅಡ್ಡಿ ಮಾಡುವುದಿಲ್ಲ. ಇದು ನಿಜವಾಗಿಯೂ ಸರಿಯಾಗಿಲ್ಲ ಎಂದು ನಾನು ಹೇಳುತ್ತೇನೆ. ಇದಕ್ಕೆ ತದ್ವಿರುದ್ಧವಾಗಿ ಇಂತಹ ಅಮೆಂಡುಮೆಂಟುಗಳನ್ನು ತರುವುದಕ್ಕೆ ಬದಲಾಗಿ ಒಂದು ಕಾಂಪ್ರಹೆನ್ಸಿವ್ ಬಿಲ್ಲನ್ನು ತಂದು ಇಲ್ಲಿ ಚರ್ಚೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಈಗೇನೋ ಮೈಸೂರು ಸಿಟಿಯಲ್ಲಿರುವ ಮುನಿಸಿಪಾಲಿಟಿಯನ್ನು ಕಾರ್ಪೊರೇಷನ್ನನ್ನಾಗಿ ಮಾಡಿಸಿ ಕೊಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟು ಬಂದಿದ್ದಾರೆ. ಅದೇ ರೀತಿ ದಾವಣಗೆರೆಯ ಮುನಿಸಿಪಾಲಿಟಿಯವರೂ ಕೂಡ ಕಾರ್ಪೊರೇಷನ್ನು ಮಾಡಿಸಿಕೊಡಬೇಕೆಂದು ಹೇಳುತ್ತಿದ್ದಾರೆ. ಹಾಗೇ ಗುಲ್ಬರ್ಗಾ ಮತ್ತು ರಾಯಚೂರಿನಲ್ಲೂ ಕಾರ್ಪೊರೇಷನ್ನು ಮಾಡಬೇಕೆಂದು ಅಲ್ಲಿನ ಮುನಿಸಿಪಾಲಿಟಿಗಳವರೂ ಕೇಳುತ್ತಿದ್ದಾರಂತೆ. ಹೀಗೆ ತಾವು ಇಲ್ಲಿ ಮಸೂದೆಯನ್ನು ತಂದು ತಿದ್ದುಪಡಿ ಮಾಡಿದರೆ ಇದು ಎಷ್ಟುಮಟ್ಟಿಗೆ ಚೆನ್ನಾಗಿರುತ್ತದೆ ಎಂದು ನಾನು ಕೇಳಬೇಕಾಗಿದೆ. ಆದುದರಿಂದ ಇಲ್ಲಿ ತಂದಿರುವ ಈ ಕಾರ್ಪೊರೇಷನ್ನು ಮಸೂದೆ 16 ಲಕ್ಷ ಜನರಿಗೆ ವಿರುದ್ಧವಾಗಿರುವುದರಿಂದ ಈ ಮಸೂದೆಯನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು, ಇಲ್ಲದೇ ಇದ್ದರೆ ಇದನ್ನು ಒಂದು ಸೆಲೆಕ್ಟು ಕಮಿಟಿಗಾದರೂ ಕಳುಹಿಸಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸ್ವಾಮಿ, ಇದುವರೆಗೂ ಬರುತ್ತಿರುವ ಸರಕಾರದಲ್ಲಿ ಚೀಫ್ ಮಿನಿಸ್ಟರು ವಿಪರೀತವಾಗಿ ಶ್ರಮಿಸಿ ಕೆಲಸ ಮಾಡುತ್ತಿದ್ದರೂ ಅವರು ಈಗ ಚೀಫ್ ಸೆಕ್ರೆಟರಿಗಳ ಲೆವಲ್ಲಿಗೆ ಬರುತ್ತಿದ್ದಾರೆ. ಹಾಗೇ ಸಬ್‌ಡಿವಿಜನ್ ಆಫೀಸುಗಳು ತಾಲ್ಲೂಕು ಲೆವಲ್ಲುಗಳಿಗೆ ಕಾರ್ಪೊರೇಷನ್ನು ಡಿ.ಸಿ. ಲೆವಲ್ಲಿಗೆ ಬರುತ್ತದೆ ಎಂದು ನಾವು ಇದರಿಂದ ಊಹಿಸಬಹುದು. ಕಾರ್ಪೊರೇಷನ್ನಿನ ಅಧಿಕಾರಿಗಳಿಗೆ ಕೂಡ ಯಾವ ಒಂದು ಅಧಿಕಾರವೂ ಇಲ್ಲದೆ ಇರುವಂತೆ ಮಾಡುವುದೇ ಇದರ ಉದ್ದೇಶವಾಗಿದೆ. ಏಕೆಂದರೆ, ತಾವು ಇಲ್ಲಿ ಪಾಸು ಮಾಡುವ ಬಿಲ್ಲು ಎಷ್ಟು ಮಹತ್ವದ್ದಾಗಿದ್ದರೂ ಅವುಗಳ ಅಧಿಕಾರವನ್ನು ಮೊಟಕು ಮಾಡುತ್ತಾ ಜನತೆಗೆ ವಿರೋಧವಾಗಿದ್ದರೂ ಕೂಡ ಪ್ರತಿಯೊಂದರಲ್ಲೂ ಸರಕಾರ ಕೈಹಾಕಬೇಕೆಂದು ಮಾಡುತ್ತಿರುವುದನ್ನು ನೋಡಿದರೆ ಇದರಿಂದ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಜನರಲ್ಲಿ ನಂಬಿಕೆ ಇಳಿಯುತ್ತಿದೆ. ಬಹಳ ಕಾಲದಿಂದ ಅಧಿಕಾರದಲ್ಲಿದ್ದಂತಹ ಆಡಳಿತ ಪಕ್ಷ ಕಾರ್ಪೊರೇಷನ್ನಿನಲ್ಲಿ ಈ ಸಾರಿ ಬೇರೆ ಒಂದು ಆಡಳಿತ ಪಕ್ಷ ಬಂದು ಅಧಿಕಾರ ಮಾಡುತ್ತಿದೆ ಎಂದು ಈಗ ಈ ರೀತಿಯಾದ ತಿದ್ದುಪಡಿಗಳನ್ನು ಇಲ್ಲಿ ಪಾಸು ಮಾಡಬೇಕೆಂದು ಮಸೂದೆ ತಂದಿದ್ದಾರೆ. ಪ್ರಜಾ ಪ್ರಭುತ್ವದಲ್ಲಿ ಇವೊತ್ತು ಒಂದು ಪಕ್ಷ ಆಡಳಿತದಲ್ಲಿರಬಹುದು. ನಾಳೆ ಆ ಪಕ್ಷದವರು ಸೋತು ವಿರೋಧ ಪಕ್ಷದವರು ಅಧಿಕಾರಕ್ಕೆ ಬರಬಹುದು. ಆದರೆ ಪಕ್ಷ ಇದರಲ್ಲಿ ಮುಖ್ಯವಲ್ಲ. ಪ್ರಜೆಗಳು ನಿಮ್ಮನ್ನು ನಂಬಿಕೊಂಡು ಅಧಿಕಾರ ಕೊಟ್ಟಿರುವಾಗ ರಾಜ್ಯದ ಆಡಳಿತವನ್ನು ಸರಿಯಾಗಿ ಮಾಡಿ ಜನಕ್ಕೆ ಉಪಕಾರವಾಗುವಂತೆ ಮಾಡಬೇಕು. ಇವೊತ್ತು ನೀವು ಅಧಿಕಾರ ವಹಿಸಿಕೊಂಡಿರಬಹುದು. ಒಂದಲ್ಲ ಒಂದು ವೇಳೆ ನಾಳೆ ವಿರೋಧ ಪಕ್ಷ ಬಂದು ಅಧಿಕಾರ ವಹಿಸಿಕೊಳ್ಳಬಹುದು. ಯಾರಾದರೂ ಇರಲಿ ಅಧಿಕಾರದಲ್ಲಿರುವವರು ಜನತೆಗೆ ಭರವಸೆ ಕೊಟ್ಟಂತೆ ಅನಾನುಕೂಲಗಳಾಗುವಂತೆ ಮಾಡಬಾರದು ಇದರಬಗ್ಗೆ ಲಕ್ಷ್ಯವಿರಲಿ ಎಂದು ಸರಕಾರದಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†SRI R. M. PATIL.—Mr. Speaker, Sir, expressing my deep debt of gratitude to the Hon'ble members who participated in this debate, I beg to state that if they had approached with a real approach to the amendments, they would have expressed in a different way. The Government has no intention to encroach upon the rights either of the Worshipful Mayor or of the standing committees or special committees or the municipal council in any manner. As a matter of fact the Government thought it fit to amend these provisions in order to enable the officers of the corporation council to augment their resources and at the same time to effect in a very effective way the administration which they are managing. The hon'ble members, amongst Sri S. M. Krishna, contended that the constitution of sub-committees, continuing the members only for one year, is against the spirit of decentralisation. With great humility I beg to submit to this House that this approach is not correct.

A member however great he may be should not be in a vested position. With that end in view the term of office is prescribed for one year and the term of committees is also prescribed for one year. The object at the time when the Act was framed as far back as 1949 was to prescribe for two years and more than two committees. The same object is intended to be implemented under the provisions of this Act.

Secondly the mayor's position. It is contended that the Mayor's position is affected. With great humility I beg to submit that it is not at all affected. He holds an exalted position. He cannot be treated as president. The president is an executive authority whereas the mayor is only a functioning authority so far as council is concerned. He is respected in this way; his views are solicited by the Government and the main function of the mayor is unaffected. That is why the Corporation Commissioner can correspond with the Government and with other authorities with the prior intimation to the Mayor. That amendment is also suggested.

Then, in respect of the supersession, they have completely misunderstood the provisions of this supersession clause. With great humility I submit that with wide or larger powers if anybody or any corporate body or any authority misbehaves, is it advisable to allow them as they are? Is it advisable on the part of the Government to remain in a helpless condition because there is no provision in the clause? I wish to bring to the notice of the Hon'ble members that every Corporation Act has provided a clause for supersession. It is inevitable, some where some-how the rot must be removed. Under such circumstances, it is absolutely essential to have such a clause in order to have effective administration. Simply because there is no clause in the present Act even though the Act is passed about 14 years back, it does not necessarily mean that it should be continued in the same form. We are seeing and some members are contending that the administration is not good so far as the Corporation is concerned. There should be some fear of authority about their own Act so that the authority may take action at one stage or the other. With that end in view this clause is provided and there is nothing unusual. It is thought fit that it should be there.

As regards the lands which are withih the jurisdiction or premises of the Corporation, it is necessary to ascertain who is the owner, whether it is the Corporation or the Government. When a doubt arises, it is necessary to ascertain who is the owner. Secondly, if the Government needs a piece of land and in such cases if the Corporation differs, the Government should not think that it is helpless, and therefore, this clause is provided.

Sir, all along, my friends were contending that the water charges are too high and it is not advisible on the part of the Water Board to charge such a high rate and so on and so forth. If we refer to the statistics, the former rate of property tax was 13½ to 15 per cent of the rental value, and after the amendment of 1964 in the Corporation Act it was reduced to 10 per cent. If the Corporation had thought fit to save some money or some percentage of the funds which they were expending

(SRI R. M. PATIL)

for purchasing bulk water in order to afford free allowance of water to the public, we would not have bothered. As a matter of fact, the Corporation was collecting only 5½ per cent by way of property tax at that time. But, they intended to collect all the 10 per cent and retain the entire money for themselves and ask the people to go and approach the Water Board. Under such circumstances, it was inevitable that some accommodation shall have to be made somewhere and that is why we thought fit to amend both the Corporation Act as well as the Bangalore Water Supply and Sewerage Board Act. There is not much difference so far as the rates are concerned. Formerly it was 13½ to 15 per cent and now 15 per cent is the minimum, As regards the quantity of water, it is up to the Corporation authorities to purchase and distribute the quantity according to the rates at which they desire to sell. They are absolutely free and they are at liberty to accommodate and adjust themselves. The function of the Government is to see that both parties come to certain arrangement and agreement to facilitate that the concession may be retained in future also.

Sri S. M. Krishna suggested that whatever agreement between the World Bank and the Government that is to take place or that has taken place should be in favour of the public. So far as World Bank is concerned, they have done their best. The Government of India have obliged us and it is really fortunate that Bangalore City, the capital of Karnatak, has got this Scheme, which is said to be a comprehensive scheme. In fact, Madhya Pradesh is after this and they have practically borrowed the Plan and the scheme from the Water Supply and Sewerage Board. The agreement is entirely in favour of the people. The question is in respect of rates. As regards the rates, it depends upon the length on which water is to be taken and carried to. In this case, I think, I made a statement on this very Floor. Perhaps the rates which are calculated may look a little high, but as a matter of fact, they are not so, because the rates are calculated including the sewerage scheme also. Rs. 6½ crores are to be spent on Sewerage Plant, and when the sewerage plant is completely well equipped and will discharge the sewerage to the fields to irrigate about 20,000 acres of land it will be an additional income. When that income is derived, naturally the Corporation or the Water Board will get that benefit and Bangalore City will derive that benefit, which is said to be an unprecedented benefit.

As regards cycle tax, its abolition, its agitation for abolition, I think there is no advisability, because when the Corporation is suffering from want of sufficient funds for the development of roads and development of other amenities, it is not advisable to abolish the cycle tax and that is why the Government came to the conclusion of not abolishing it. It may be their sentiments so far as the Powra Samithi party is concerned, to abolish the cycle tax. But, those who backed that Powra Samithi and who are now in the administration, favoured that the cycle

tax should be continued in future. The Samithi, when it is out of power, is now agitating that it should be abolished. I think there is no advisability in contending that

SRI S. GOPALA GOWDA.—Mr. Speaker, Sir, what the Hon'ble Minister just now said is far from truth. Whenthe Powra Samithi. Mayor was there, he did try to abolish the cycle tax.

MR. SPEAKER.—The Hon'ble Minister has not yielded.

ಶ್ರೀ ಎಸ್. ಗೋಪಾಲ ಗೌಡ.—ನಾವು ಹಗಲಲ್ಲ ಕುಳಿತುಕೊಂಡು ಏಳಬೇಕೇ ?

MR. SPEAKER.—Sri Gopala Gowda, in the first place, has committed a breach in not appealing to him to yield. He went on. I thought, either of them will yield, but nobody yielded. And then, the Member passes on to make personal remarks. That is really bad.

SRI R. M. PATIL.—Sir, Sri Deviah has clearly emphasised the intention of Government because he knows the difficulties. He comes from Bangalore Corporation area and as such he has studied the problems and his views are really worth considering. Sir, my submission is, the contention of other members are not sustainable.

SRI S. M. KRISHNA.—The Minister remarked about cycle tax. Has not the Corporation of Bangalore last year passed a resolution recommending the abolition of cycle tax ?

SRI R. M. PATIL.—The Corporation with majority had passed a resolution. But, it is not necessary that Government should comply with the resolution of the Corporation if it goes against the financial interest of the Corporation as such.

ಶ್ರೀ ಎಸ್. ಎಂ. ಕೃಷ್ಣ.—ಸ್ವಾಮಿ, ಅವರು ಅಧಿಕಾರದಲ್ಲಿದ್ದಾಗ ಸೈಕಲ್ ಟ್ಯಾಕ್ಸನ್ನು ಅಬಾಲಿಷ್ ಮಾಡಬಹುದಾಗಿತ್ತು. ಈಗ ಅಧಿಕಾರ ಹೋದಮೇಲೆ ಸೈಕಲ್ ಟ್ಯಾಕ್ಸನ್ನು ಅಬಾಲಿಷ್ ಮಾಡಬೇಕೆಂದು ಚಳುವಳಿ ಮಾಡುತ್ತಿದ್ದಾರೆ ಎಂದು ಮಂತ್ರಿಗಳು ಹೇಳಿದರು. ಅವರು ಅಧಿಕಾರದಲ್ಲಿದ್ದಾಗ ಸೈಕಲ್ ಟ್ಯಾಕ್ಸನ್ನು ಮನ್ನಾ ಮಾಡಿ ಎಂದು ನಿರ್ಣಯವನ್ನು ಪಾಸ್ ಮಾಡಿ ಸರ್ಕಾರಕ್ಕೆ ಕಳುಹಿಸಿರಲಿಲ್ಲವೇ ? ಅದಕ್ಕೆ ಸರ್ಕಾರದವರು ಒಪ್ಪಿಗೆ ಕೊಡಲಿಲ್ಲ. ಆದಕಾರಣ ಚಳುವಳಿ ಮಾಡಬೇಕಾಗಿ ಬಂದಿದೆ.

SRI R. M. PATIL.—The founder of the Poura Samiti was in the administration and he is the sponsor of this move. Why did he not abolish it when he was in power ?

MR. SPEAKER.—Now, the question is :

"That the City of Bangalore Municipal Corporation (Amendment) Bill, 1966 be taken into consideration."

The motion was adopted.

CLAUSES 2 TO 5.

MR. SPEAKER.—The question is :

"That clauses 2 to 5 both inclusive stand part of the Bill."

The motion was adopted.

Clauses 2 to 5, both inclusive, were added to the Bill.

CLAUSE 6.

Mr. SPEAKER.—There is an amendment.

Sri R. M. PATIL.—I beg to move :

"That in clause 6, at page 3, in sub-clause (1) in the new sub-section (2) of the section 39, the following proviso shall be added, namely :—

"Provided that no letter shall be sent to the Government by the Commissioner without previous intimation to the Mayor, and on such intimation the Mayor may furnish his views, if any, on such letter to the Government."

Mr. SPEAKER.—The question is :

"That in clause 6 at page 3, in sub-clause (1) in the new sub-section (2) of the section 39, the following proviso shall be added, namely :—

"Provided that no letter shall be sent to the Government by the Commissioner without previous intimation to the Mayor, and on such intimation the Mayor may furnish his views, if any, on such letter to the Government."

The amendment was adopted.

Mr. SPEAKER.—I will put it to the vote.

The question is :

"That clause 6, as amended, stand part of the Bill."

The motion was adopted.

Clause 6, as amended, was added to the Bill.

CLAUSES 7 TO 15.

Mr. SPEAKER.—The question is :

"That clauses 7 to 15, both inclusive, stand part of the Bill."

The motion was adopted.

Clauses 7 to 15, both inclusive, were added to the Bill.

CLAUSE 16.

Mr. SPEAKER.—There is an amendment.

Sri R. M. PATIL.—Sir, I move :

"That in sub-clause (4), in line 2, for the words "twenty thousand rupees" the words "twenty-five thousand rupees" shall be substituted."

Mr. SPEAKER.—Amendment : I will put it to the vote.

The question is :

" That in sub-clause (4), in line 2, for the words " twenty thousand rupees " the words " twenty-five thousand rupees " shall be substituted."

The amendment was adopted.

Mr. SPEAKER.—The question is :

" That Clause 16, as amended, stand part of the Bill."

The motion was adopted.

Clause 16, as amended, was added to the Bill.

CLAUSES 17 TO 21.

Mr. SPEAKER.—The question is :

" That clauses 17 to 21, both inclusive, stand part of the Bill."

The motion was adopted.

Clauses 17 to 21, both inclusive, were added to the Bill.

CLAUSE 22.

Mr. SPEAKER.—There is an amendment.

Sri R. M. PATIL.—I beg to move :

" That at page 11, in sub-section (2) of the new section 104, in line three, for the words " ten per cent," the words " five per cent " shall be substituted."

AMENDMENT

Mr. SPEAKER.—I will put it to the vote. The question is :

" That at page 11, in sub-section (2) of the new section 104, in line three, for the words " ten per cent " the words " five per cent " shall be substituted."

The amendment was adopted.

Mr. SPEAKER.—The question is :

" That clause 22, as amended, stands part of the Bill."

The motion was adopted.

Clause 22, as amended, was added to the Bill.

CLAUSES 23 TO 35.

Mr. SPEAKER.—Both inclusive. The question is :

" That clauses 23 to 35, both inclusive, stand part of the Bill."

The motion was adopted.

Clauses 23 to 35, both inclusive, were added to the Bill.

CLAUSE 1, ETC.

Mr. SPEAKER.—The question is:

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri R. M. PATIL (Minister for Municipal Administration).—Sir, I beg to move:

"That the City of Bangalore Municipal Corporation (Amendment) Bill, 1966, as amended, be passed."

Mr. SPEAKER.—The question is:

"That the City of Bangalore Municipal Corporation (Amendment) Bill, 1966, as amended, be passed."

The motion was adopted.

Mr. SPEAKER.—Now, we go to the next Bill.

MYSORE IRRIGATION LEVY OF BETTERMENT CONTRIBUTION AND WATER RATE (AMENDMENT) BILL, 1966.

Motion to consider.

Sri S. NIJALINGAPPA (Chief Minister).—Sir, I beg to move:

"That the Mysore Irrigation Levy of Betterment Contribution and Water rate (Amendment) Bill, 1966 be taken into consideration."

Mr. SPEAKER.—Motion moved:

"That the Mysore Irrigation Levy of Betterment Contribution and Water rate (Amendment) Bill, 1966 be taken into consideration."

Sri S. NIJALINGAPPA.—Sir, this is a very simple Bill and I am sure the whole House will accept it and that it is so will be borne out by the fact that not a single amendment is sent. That shows that this has the full approval of the House. In the original Bill, there was a sort of discrimination and the amount of betterment tax or levy was very high. That is why, Government felt that this distinction of minor, major and medium irrigation schemes may be done away with so that there may not be any legal difficulties later on.